# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/167/2022-23

ಜ್ಞಾನ ಭಾರತಿ,
ಬೆಂಗಳೂರು-560 056
ದಿನಾಂಕ: 03.02.2023

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056.

ಮಾನ್ಯರೇ,

ವಿಷಯ: ದಿನಾಂಕ 24.01.2023 ರಂದು ಜರುಗಿದ 167ನೇ ಸಿಂಡಿಕೇಟ್ ಸಭೆಯ ನಡಾವಳಿಗಳು

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 03.02.2023

******

ದಿನಾಂಕ 24.01.2023 ರಂದು ಬೆಳಗ್ಗೆ 11.00 ಗಂಟೆಗೆ ಜರುಗಿದ 167ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,

3/2/23

ಕುಲಸಚಿವರು

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/167/ಸಾ.ಸ./2022-23

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 30.01.2023

**ದಿನಾಂಕ 24-01-2023 ರಂದು ಬೆಳಿಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಆಡಳಿತ ಕಚೇರಿ ಕಟ್ಟಡ, ಜ್ಞಾನಭಾರತಿ ಆವರಣ, ಬೆಂಗಳೂರು-560 056, ಇಲ್ಲಿ ಜರುಗಿದ 167ನೇ ಸಿಂಡಿಕೇಟ್ ಸಭೆಯ ನಡಾವಳಿಗಳು.**

<u>ಹಾಜರಾದ ಸದಸ್ಯರು:</u>

| | | |
|---|---|---|
| 1. ಪ್ರೊ. ಡಾ. ಜಯಕರ ಎಸ್ ಎಂ<br>ಕುಲಪತಿಗಳು | - | ಸಭಾಧ್ಯಕ್ಷರು |
| 2. ಪ್ರೊ. ಸಿಂಥಿಯಾ ಮೆನೇಝಸ್ | - | ಸದಸ್ಯರು |
| 3. ಡಾ. ಸುಧಾಕರ್. ಹೆಚ್ | - | ಸದಸ್ಯರು |
| 4. ಶ್ರೀ ಎಂ. ಉದಯಕುಮಾರ್ | - | ಸದಸ್ಯರು |
| 5. ಪ್ರೊ. ವಿ.ವಿ. ಸುರೇಶ್ ಬಾಬು | - | ಸದಸ್ಯರು |
| 6. ಶ್ರೀ ಹರೀಶ್ ನಾಯ್ಕ್ | - | ಸದಸ್ಯರು |
| 7. ಡಾ. ಕೆ.ಎ. ಮಹೇಶ್ವರಯ್ಯ | - | ಸದಸ್ಯರು |
| 8. ಶ್ರೀಮತಿ ಕ್ಷಮಾ ಕುಲಕರ್ಣಿ | - | ಸದಸ್ಯರು |
| 9. ಶ್ರೀಮತಿ ಸಿ ತೇಜಸ್ವಿನಿ | - | ಸದಸ್ಯರು |
| 10. ಪ್ರೊ. ಜೆ.ಟಿ. ದೇವರಾಜು,<br>ಕುಲಸಚಿವರು (ಮೌಲ್ಯಮಾಪನ) | - | ಸದಸ್ಯರು |
| 11. ಶ್ರೀ. ಎನ್. ಮಹೇಶ್ ಬಾಬು, ಕೆ.ಎ.ಎಸ್.<br>ಕುಲಸಚಿವರು | - | ಸದಸ್ಯ ಕಾರ್ಯದರ್ಶಿ |

ಎರಡು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ ಸಭೆಯನ್ನು ನಡೆಸಿಕೊಡಬೇಕೆಂದು ಕುಲಪತಿಗಳಲ್ಲಿ ಕೋರಿದರು.

ಕುಲಪತಿಗಳು ಸದಸ್ಯರೆಲ್ಲರಿಗೂ ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

1/4 3/2/23

***Proceedings of the 167[th] meeting of the Syndicate held on 24.01.2023***

**ವಿಷಯ ಸಂಖ್ಯೆ 01 :** ದಿನಾಂಕ 13.09.2022 ಜರುಗಿದ ವಿಶೇಷ ಸಿಂಡಿಕೇಟ್ ಸಭೆ, ದಿನಾಂಕ: 10-10-2022 ರಂದು ಜರುಗಿದ 166ನೇ ಸಿಂಡಿಕೇಟ್ ಸಭೆ ಮತ್ತು ದಿನಾಂಕ 31.10.2022 ರಂದು ಜರುಗಿದ ಮುಂದೂಡಿದ 166ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 09.12.2022 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 13.09.2022 ಜರುಗಿದ ವಿಶೇಷ ಸಿಂಡಿಕೇಟ್ ಸಭೆ ಮತ್ತು ದಿನಾಂಕ: 10-10-2022 ರಂದು ಜರುಗಿದ 166ನೇ ಸಿಂಡಿಕೇಟ್ ಸಭೆ ಮತ್ತು ದಿನಾಂಕ 31.10.2022 ರಂದು ಜರುಗಿದ ಮುಂದೂಡಿದ 166ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 09.12.2022 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ಸಿಂಡಿಕೇಟ್ ಸ್ಥಿರೀಕರಿಸಿತು.

***Proceedings of the 167[th] meeting of the Syndicate held on 24.01.2023***

**ವಿಷಯ ಸಂಖ್ಯೆ 02:** ದಿನಾಂಕ 13.09.2022 ಜರುಗಿದ ವಿಶೇಷ ಸಿಂಡಿಕೇಟ್ ಸಭೆ, ದಿನಾಂಕ: 10-10-2022 ರಂದು ಜರುಗಿದ 166ನೇ ಸಿಂಡಿಕೇಟ್ ಸಭೆ ಮತ್ತು ದಿನಾಂಕ 31.10.2022 ರಂದು ಜರುಗಿದ ಮುಂದೂಡಿದ 166ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 09.12.2022 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಗಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳು (ATR)

**ನಿರ್ಣಯ:**

ದಿನಾಂಕ 13.09.2022 ಜರುಗಿದ ವಿಶೇಷ ಸಿಂಡಿಕೇಟ್ ಸಭೆ ದಿನಾಂಕ: 10-10-2022 ರಂದು ಜರುಗಿದ 166ನೇ ಸಿಂಡಿಕೇಟ್ ಸಭೆ ಮತ್ತು ದಿನಾಂಕ 31.10.2022 ರಂದು ಜರುಗಿದ ಮುಂದೂಡಿದ 166ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 09.12.2022 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಗಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳನ್ನು (ATR) ಕೆಳಕಂಡ ಚರ್ಚೆ ಮತ್ತು ನಿರ್ಣಯದೊಂದಿಗೆ ಸಿಂಡಿಕೇಟ್ ಅನುಮೋದಿಸಿತು.

1. ಡಾ. ಕೆ.ಎ. ಮಹೇಶ್ವರಯ್ಯ ಅವರು ಮಾತನಾಡಿ, ಸಹಾಯಕ ಪ್ರಾಧ್ಯಾಪಕರಿಂದ, ಸಹ ಪ್ರಾಧ್ಯಾಪಕರು ಹಾಗೂ ಪ್ರಾಧ್ಯಾಪಕರಾಗಿ ಸಿ.ಎ.ಎಸ್. ಅಡಿಯಲ್ಲಿ ಪದೋನ್ನತಿ ಪಡೆಯಲು ಇರುವ ಮಾನದಂಡಗಳ ಬಗ್ಗೆ ಮಾಹಿತಿ ಬಯಸಿದರು.

   ಕುಲಸಚಿವರು(ಮೌಲ್ಯಮಾಪನ) ಆದ ಪ್ರೊ. ಜೆ.ಟಿ. ದೇವರಾಜು ಅವರು ಮಾತನಾಡಿ, ಸಹಾಯಕ ಪ್ರಾಧ್ಯಾಪಕರು – ಸ್ಟೇಜ್ -1 ರಿಂದ ಸ್ಟೇಜ್-2 ಹಾಗೂ ಸ್ಟೇಜ್-2 ರಿಂದ ಸ್ಟೇಜ್-3ಕ್ಕೆ ಮತ್ತು ಸ್ಟೇಜ್-3ರಿಂದ ಸಹ ಪ್ರಾಧ್ಯಾಪಕರು ಹಾಗೂ ಸಹ ಪ್ರಾಧ್ಯಾಪಕರಿಂದ ಪ್ರಾಧ್ಯಾಪಕರಾಗಿ ಪದೋನ್ನತಿ ಹೊಂದಲು ನಿಗದಿಪಡಿಸಲಾದ ಯು.ಜಿ.ಸಿ. ಮಾನದಂಡಗಳು ಹಾಗೂ ಅನುಮೋದಿತ ವಿಶ್ವವಿದ್ಯಾಲಯದ ಪರಿನಿಯಮಗಳ ವಿವರಗಳನ್ನು ನೀಡಿದರು.

2. ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ದಿನಾಂಕ: 31–10–2022ರ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ 22ರ ಮೇಲೆ ತೆಗೆದುಕೊಂಡಿರುವ ನಿರ್ಣಯದ ಮೇಲೆ ಮಾತನಾಡಿ, ಸಹಾಯಕ ಗ್ರಂಥಪಾಲಕರುಗಳನ್ನು ನೇಮಿಸಿಕೊಳ್ಳಲು ಹೊಸದಾಗಿ ಪತ್ರಿಕಾ ಪ್ರಕಟಣೆ ನೀಡಿರುವುದರ ಬಗ್ಗೆ ಪ್ರಸ್ತಾಪಿಸಿ, ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಗ್ರಂಥಪಾಲಕರ ಅನುಭವ ಮತ್ತು ಪರಿಸ್ಥಿತಿಯ ಬಗ್ಗೆ ತಿಳಿಸಿ, ಅವರನ್ನೇ ಮುಂದುವರೆಸಲು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಆರೋಗ್ಯ ಕೇಂದ್ರ ಹಾಗೂ ಇತರ ವಿಭಾಗಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರನ್ನು ಹೊರಗುತ್ತಿಗೆ ಆಧಾರದ ಮೇಲೆ ಆರು ತಿಂಗಳುಗಳಿಗೊಮ್ಮೆ ಒಂದು ದಿನ ಬಿಡುವು ನೀಡಿ ಸೇವೆಯನ್ನು ಮುಂದುವರೆಸುತ್ತಿರುವುದರಿಂದ, ಅದೇ ಆದಾರದ ಮೇಲೆ ಸಹಾಯಕ ಗ್ರಂಥಪಾಲಕರ ಸೇವೆಯನ್ನು ಮುಂದುವರೆಸಬಹುದಾಗಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಈಗಾಗಲೇ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ ಸಹಾಯಕ ಗ್ರಂಥಪಾಲಕರುಗಳ ಸೇವೆಯು ಅಂತ್ಯ ಗೊಳ್ಳುತ್ತಿರುವುದರಿಂದ ಹಾಗೂ ಸರ್ಕಾರ ಹೊಸ ಮೀಸಲಾತಿ ನಿಯಮ ಹಾಗೂ ರೋಷ್ಟರ್ ಪದ್ಧತಿ ಜಾರಿಗೆ ತಂದಿರುವುದರಿಂದ, ಅದರ ಪ್ರಕಾರ ನೇಮಕಾತಿ ಮಾಡಿಕೊಳ್ಳಲು ಪ್ರಕಟಣೆ ನೀಡಲಾಗಿದೆ. ಸಂದರ್ಶನ ನಡೆಸಿ ಪರಿಷ್ಕೃತ ಮೀಸಲಾತಿ ನಿಯಮದನುಸಾರ ನೇಮಕಾತಿ ಮಾಡಿಕೊಳ್ಳಲಾಗುವುದು. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿದ್ದವರಿಗೆ ಮೆರಿಟ್ ಇದ್ದಲ್ಲಿ ಅವರು ಮರು ಆಯ್ಕೆ ಹೊಂದಬಹುದಾಗಿದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಸಹಾಯಕ ಗ್ರಂಥಪಾಲಕರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವಾಗ ರೋಷ್ಟರ್ ಅನುಸರಿಸಿ ಮೆರಿಟ್ ಪಟ್ಟಿ ಮಾಡಿ ನಂತರ ಸಿಂಡಿಕೇಟ್ ಮುಂದೆ ಮಂಡಿಸಲಾಗುವುದು ಎಂದು ತಿಳಿಸಿದರು.

3. ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ, ಪ್ರತಿ ವರ್ಷ 4ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಂದ ತರಗತಿಗಳು ಪ್ರಾರಂಭವಾದ ಎರಡು ವಾರದ ಒಳಗಾಗಿ ಶಿಕ್ಷಕರ ಮೌಲ್ಯಮಾಪನ/ಪ್ರತಿಕ್ರಿಯೆಯನ್ನು ಪಡೆದುಕೊಳ್ಳುವುದು ಕಡ್ಡಾಯ ಮಾಡಬೇಕೆಂದು ತಿಳಿಸಿದರು.

4. ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ಈಶಾನ್ಯ ರಾಜ್ಯಗಳ ವಿದ್ಯಾರ್ಥಿನಿಯರ ಹಾಸ್ಟೆಲ್ ಕಟ್ಟಡ ನಿರ್ಮಾಣ ಸಂಬಂಧಪಟ್ಟಂತೆ 31ನೇ ಮಾರ್ಚ್ 2023ರ ಒಳಗೆ ಅನದಾನ ಉಪಯೋಗ ಪ್ರಮಾಣ ಪತ್ರ ಸಲ್ಲಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಈಶಾನ್ಯ ರಾಜ್ಯಗಳ ವಿದ್ಯಾರ್ಥಿನಿಯರ ಹಾಸ್ಟೆಲ್‌ಗೆ ಮಂಜೂರಾಗಿರುವ ಅನುದಾನದ ಮೊತ್ತದ ಉಪಯೋಗಿಸದೇ ಇರುವ ಮೊತ್ತವನ್ನು ಪ್ರತ್ಯೇಕ ಬ್ಯಾಂಕ್ ಖಾತೆಗೆ ವರ್ಗಾವಣೆ

ಮಾಡಲು ನಿರ್ದೇಶನ ಬಂದಿದ್ದು, ಅದರಂತೆ ಕ್ರಮ ವಹಿಸಲಾಗುವುದು. ನಂತರ ಸದರಿ ಅನುದಾನ ಉಪಯೋಗಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

***Proceedings of the 167th meeting of the Syndicate held on 24.01.2023***

**ವಿಷಯ ಸಂಖ್ಯೆ 03:** ಪ್ರೊ. ಜಯಕುಮಾರ್ ಜಿ. ರೆಡ್ಡಿ, ಪ್ರಾಧ್ಯಾಪಕರು (ನಿವೃತ್ತ) ದೃಶ್ಯಕಲಾ ವಿಭಾಗ, ಇವರ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಪ್ರೊ. ಜಯಕುಮಾರ್ ಜಿ. ರೆಡ್ಡಿ, ಪ್ರಾಧ್ಯಾಪಕರು (ನಿವೃತ್ತ) ದೃಶ್ಯಕಲಾ ವಿಭಾಗ, ಇವರ ವಾರ್ಷಿಕ ವೇತನ ಬಡ್ತಿ ಮತ್ತು ಗಳಿಕೆ ರಜೆಯ ವಿಷಯವಾಗಿ ರಚಿಸಲಾಗಿದ್ದ ಕುಲಸಚಿವರ ನೇತೃತ್ವದ ಸಮಿತಿಯ ದಿನಾಂಕ: 21-11-2022ರ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು.

***Proceedings of the 167th meeting of the Syndicate held on 24.01.2023***

**Item No. 04:** Continuation of recognition of the Institutes recognized u/s 66 of the K.S.U Act, 2000 as Centre for Specialized/Specified Studies-reg.

Mr. Udaya Kumar M, opined that a Committee has to be visited to the Institutes recognized u/s 66 of the K.S.U Act, 2000 as Centre for Specialized/Specified Studies for extension of period of recognition / MOU and he urged to constitute a Committee.

The Vice-Chancellor informed that a Committee has already been constituted in respect of Institute of Bioinformatics and Biotechnology (IBAB) for extension of recognition and introduction of new course namely, M.Sc. programme in Big Data Biology from the year 2023-24. Separate Committee will be constituted for other institutions.

***Resolution:***

After detailed discussion, it was resolved to authorize the Vice-Chancellor to constitute a Committee for continuation of recognition of Institutes recognized u/s 66 of the K.S.U Act, 2000 as Centre for Specialized/Specified Studies and ratified the action taken by the University in constitution of a Committee for inspection of IBAB.

W 2/2/23

***Proceedings of the 167th meeting of the Syndicate held on 24.01.2023***

**ವಿಷಯ ಸಂಖ್ಯೆ 05:** ಡಾ. ಕಾ.ವೆಂ. ಶ್ರೀನಿವಾಸಮೂರ್ತಿರವರು ಡಿ.ಲಿಟ್ ಪದವಿಯನ್ನು ಬಾಹ್ಯ ವಿದ್ಯಾರ್ಥಿಯಾಗಿ ಮಾಡಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಡಾ. ಕಾ.ವೆಂ. ಶ್ರೀನಿವಾಸಮೂರ್ತಿರವರು ಯಾವ ವಿಶ್ವವಿದ್ಯಾಲಯದಲ್ಲಿ ಡಿ.ಲಿಟ್ ಪದವಿಯನ್ನು ಬಾಹ್ಯ ವಿದ್ಯಾರ್ಥಿಯಾಗಿ ಮಾಡಬಯಸಿದ್ದಾರೆ, ಎಷ್ಟು ವರ್ಷದ ಅವಧಿಗೆ ಅವಕಾಶ ಕೋರಿರುತ್ತಾರೆ ಮತ್ತು ಯಾವ ವಿಷಯದಲ್ಲಿ ಡಿ.ಲಿಟ್ ಪದವಿ ಮಾಡಬಯಸಿದ್ದಾರೆ ಎಂಬುದರ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ಹಾಗೂ ಸದರಿ ವಿಷಯದಲ್ಲಿ ಕಾನೂನು ಅಭಿಪ್ರಾಯವನ್ನು ಸಹ ಪಡೆದು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸುವಂತೆ ಸೂಚಿಸಿತು.

***Proceedings of the 167th meeting of the Syndicate held on 24.01.2023***

**ವಿಷಯ ಸಂಖ್ಯೆ 06:** ದಿನಾಂಕ 2023-24ನೇ ಸಾಲಿನ ಸಂಯೋಜನಾ ಪ್ರಕ್ರಿಯೆಗೆ ಸಂಯೋಜನಾ ಶುಲ್ಕಗಳನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 2023-24ನೇ ಸಾಲಿನ ಸಂಯೋಜನಾ ಪ್ರಕ್ರಿಯೆಗೆ ಸಂಯೋಜನಾ ಶುಲ್ಕಗಳನ್ನು ಪರಿಷ್ಕರಿಸುವ ಸಂಬಂಧ ಕುಲಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ವರದಿಯನ್ನು ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ (2) (g) (iv)ರ ಅಡಿಯಲ್ಲಿ ಅನುಮೋದಿಸಿತು ಹಾಗೂ ಪರಾಮರ್ಶಿತ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ಪ್ರಸ್ತುತ ಇರುವ ಸಂಯೋಜನಾ ಶುಲ್ಕಗಳನ್ನು ಶೇಕಡಾ 10ರಷ್ಟು ಹೆಚ್ಚಿಸಿ ಪರಿಷ್ಕೃತ ಶುಲ್ಕಗಳನ್ನು 2023-24ನೇ ಸಾಲಿಗೆ ನಿಗದಿಪಡಿಸಲು ಹಾಗೂ ಸರ್ಕಾರದ ಯುಯುಸಿಎಂಎಸ್ ತಂತ್ರಾಂಶದಲ್ಲಿ ಸ್ವೀಕರಿಸಲ್ಪಡುವಂತೆ ಸಣ್ಣಪುಟ್ಟ ಮಾರ್ಪಾಟುಗಳನ್ನು ಕುಲಪತಿಯವರ ಅನುಮೋದನೆಯನ್ನು ಪಡೆದು ಮಾಡಿಕೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು.

***Proceedings of the 167th meeting of the Syndicate held on 24.01.2023***

**ವಿಷಯ ಸಂಖ್ಯೆ 07:** 2023-24ನೇ ಸಾಲಿಗೆ ಆರ್.ಎನ್.ಎಸ್ ಪ್ರಥಮ ದರ್ಜೆ ಕಾಲೇಜಿಗೆ ಹೊಸದಾಗಿ ಸ್ವಾಯತ್ತತೆ ಮಂಜೂರು ಮಾಡುವ ಸಲುವಾಗಿ ಸ್ಥಾಯಿ ಸಮಿತಿಯನ್ನು ರಚಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, 2023-24ನೇ ಸಾಲಿಗೆ ಆರ್.ಎನ್.ಎಸ್ ಪ್ರಥಮ ದರ್ಜೆ ಕಾಲೇಜಿಗೆ ಹೊಸದಾಗಿ ಸ್ವಾಯತ್ತತೆ ಮಂಜೂರು ಮಾಡುವ ಸಲುವಾಗಿ ಸ್ಥಾಯಿ ಸಮಿತಿಯನ್ನು ರಚಿಸಲು ಸಿಂಡಿಕೇಟ್ ಕುಲಪತಿಯವರಿಗೆ ಅಧೀಕರಿಸಿತು.

**ವಿಷಯ ಸಂಖ್ಯೆ 08:** 2022–23ನೇ ಸಾಲಿಗೆ ಶ್ರೀ ಎಸ್. ಕರಿಯಪ್ಪ ಕಾಲೇಜ್ ಆಫ್ ಎಜುಕೇಷನ್ ಮತ್ತು ಶ್ರೀ ರಾಘವೇಂದ್ರ ಕಾಲೇಜ್ ಆಫ್ ಎಜುಕೇಷನ್‌ಗಳ ಸಂಯೋಜನಾ ನವೀಕರಣದ ವಿಷಯದಲ್ಲಿ ಪ್ರೊ. ಎಂ. ನಾರಾಯಣಸ್ವಾಮಿ, ಡೀನರು, ಶಿಕ್ಷಣ ನಿಕಾಯ ಇವರ ಅಧ್ಯಕ್ಷತೆಯಲ್ಲಿ ಸಲ್ಲಿಸಲಾದ ಸ್ಥಳೀಯ ವಿಚಾರಣಾ ಸಮಿತಿಯ ವರದಿಗಳನ್ನು ಪರಿಗಣಿಸುವ ಬಗ್ಗೆ.

ಪ್ರೊ. ಉದಯ ಕುಮಾರ್ ಎಂ ಅವರು ಮಾತನಾಡಿ, ಶಿಕ್ಷಣ ಕಾಲೇಜುಗಳಲ್ಲಿ ಪರಿಪೂರ್ಣ ಮೂಲಭೂತ ಸೌಕರ್ಯಗಳು ಲಭ್ಯವಿರುವುದಿಲ್ಲ, ಕೆಲವೊಮ್ಮೆ ಸಮಿತಿಗೆ ತಪ್ಪು ಮಾಹಿತಿ ಒದಗಿಸುತ್ತಾರೆ. ಆದಕಾರಣ, ದಿಢೀರ್ ಭೇಟಿ (Surprise visit) ನೀಡಿ ಪರಿಶೀಲಿಸುವುದು ಒಳಿತೆಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ಎಸ್. ಕರಿಯಪ್ಪ ಕಾಲೇಜ್ ಆಫ್ ಎಜುಕೇಷನ್ ಮತ್ತು ಶ್ರೀ ರಾಘವೇಂದ್ರ ಕಾಲೇಜ್ ಆಫ್ ಎಜುಕೇಷನ್‌ಗಳ ಸಂಯೋಜನಾ ನವೀಕರಣದ ವಿಷಯದಲ್ಲಿ ದಿಢೀರ್ ಭೇಟಿ ನೀಡಿ ಪರಿಶೀಲಿಸಿ ಸಮಿತಿಯಿಂದ ವರದಿಯನ್ನು ಪಡೆದುಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು ಹಾಗೂ ಸಮಿತಿಯನ್ನು ರಚಿಸಲು ಕುಲಪತಿಗಳಿಗೆ ಅಧೀಕರಿಸಿತು.



**ವಿಷಯ ಸಂಖ್ಯೆ 09**: ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ವೃತ್ತಿಪರ ತರಬೇತಿಗಳಲ್ಲಿ ಪದವಿ (Bachelor of Vocational Training B.Voc) ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 66 (1) ರನ್ವಯ ಮಾನ್ಯತೆಯನ್ನು ನೀಡಿ ಪ್ರಾರಂಭಿಸುವ ಕುರಿತು.

**ನಿರ್ಣಯ:**

ಚರ್ಚೆಯ ನಂತರ, ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ವೃತ್ತಿಪರ ತರಬೇತಿಗಳಲ್ಲಿ ಪದವಿ (Bachelor of Vocational Training B.Voc) ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 66 (1) ರನ್ವಯ ಮಾನ್ಯತೆಯನ್ನು ನೀಡಲು ಪರಿನಿಯಮಾವಳಿಯ 5.2ರ ಪ್ರಕಾರ ಪರಿಣಿತರ ಸಮಿತಿಯನ್ನು ರಚಿಸಲು ಸಿಂಡಿಕೇಟ್ ಕುಲಪತಿಗಳಿಗೆ ಅಧೀಕರಿಸಿತು.

**Proceedings of the 167th meeting of the Syndicate held on 24.01.2023**

**ವಿಷಯ ಸಂಖ್ಯೆ 10:** ಬೆಂಗಳೂರಿನ ಜಿ.ಟಿ. ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್‌ನ ಎಂ.ಸಿ.ಎ ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಪ್ರಕಾರ ಎ.ಐ.ಸಿ.ಟಿ.ಇ ನಿಗದಿಪಡಿಸಿರುವಂತೆ, ವಿಷಯ ಪರಿಣಿತರ ವರದಿ ಅನುಸಾರ ಸರ್ಕಾರವು ನಿಗದಿಪಡಿಸಿ ಶಿಫಾರಸ್ಸು ಮಾಡಿದ ಕಾರಣ ಪರಿಷ್ಕೃತ ವಿದ್ಯಾರ್ಥಿ ಪ್ರಮಾಣದೊಂದಿಗೆ ಸಂಯೋಜನೆಯನ್ನು ಮಂಜೂರು ಮಾಡಿರುವ ಕ್ರಮವನ್ನು ಅನುಸಮರ್ಥಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ರಿಟ್ ಅರ್ಜಿ ಸಂಖ್ಯೆ:20773/2022ರ ಪ್ರಕರಣದಲ್ಲಿ ಮಾನ್ಯ ಉಚ್ಚನ್ಯಾಯಾಲಯದ ಆದೇಶ 07-11-2022 ಹಾಗೂ ಸರ್ಕಾರದ ಪತ್ರ ದಿನಾಂಕ: 07-12-2022ರ ಅನುಸಾರ, ಜಿ.ಟಿ. ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್‌ನ ಎಂ.ಸಿ.ಎ ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು ಎ.ಐ.ಸಿ.ಟಿ.ಇ ನಿಗದಿಪಡಿಸಿರುವಂತೆ 60(ಅರವತ್ತು)ಕ್ಕೆ ನಿಗದಿಪಡಿಸಿ ಹೊರಡಿಸಲಾದ ವಿಶ್ವವಿದ್ಯಾಲಯದ ತಿದ್ದುಪಡಿ ಅಧಿಸೂಚನೆ ದಿನಾಂಕ: 22-12-2022ನ್ನು ಸಿಂಡಿಕೇಟ್ ಅನುಸಮರ್ಥಿಸಿತು.

ಮುಂದುವರೆದು, ಸದರಿ ಕೋರ್ಸಿಗೆ ಸಂಬಂಧಿಸಿದಂತೆ ಎ.ಐ.ಸಿ.ಟಿ.ಇ./ವಿಶ್ವವಿದ್ಯಾಲಯದ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಮೇಲ್ಕಂಡ ಕಾಲೇಜಿಗೆ ಸೂಚನೆ ನೀಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

**Proceedings of the 167th meeting of the Syndicate held on 24.01.2023**

**ವಿಷಯ ಸಂಖ್ಯೆ 11:** ಶ್ರೀ ರಘು ಡಿ.ಎಸ್, ನಿವೃತ್ತ ಸಹಾಯಕ ಕುಲಸಚಿವರು, ಹಣಕಾಸು ವಿಭಾಗ ಮತ್ತು ಶ್ರೀ ಸಿದ್ಧಲಿಂಗಯ್ಯ (ನಿವೃತ್ತ ಅನುಚರರು) ಸ್ವಾಗತಕಾರ ಕಛೇರಿ (ಪಿ.ಆರ್.ಓ) ನೌಕರರುಗಳ ಸೇವೆಯನ್ನು ನಿವೃತ್ತಿಯ ನಂತರವು ಪಡೆಯುವ ವಿಷಯದ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ರಘು ಡಿ.ಎಸ್, ನಿವೃತ್ತ ಸಹಾಯಕ ಕುಲಸಚಿವರು, ಹಣಕಾಸು ವಿಭಾಗ ಮತ್ತು ಶ್ರೀ ಸಿದ್ಧಲಿಂಗಯ್ಯ (ನಿವೃತ್ತ ಅನುಚರರು) ಸ್ವಾಗತಕಾರ ಕಛೇರಿ (ಪಿ.ಆರ್.ಓ) ಇವರುಗಳ ಸೇವೆಯನ್ನು ಕನ್ಸಲ್ಟೆಂಟ್ ಆಗಿ ಕ್ರಮವಾಗಿ ಮಾಹೆಯಾನ ರೂ.25,000/- ಮತ್ತು ರೂ.18,000/- ದರದಲ್ಲಿ ಆರು ತಿಂಗಳ ಅವಧಿಗೆ ಪಡೆಯಲು ಸಿಂಡಿಕೇಟ್ ಅನುಮೋದಿಸಿತು.

**Proceedings of the 167th meeting of the Syndicate held on 24.01.2023**

**ವಿಷಯ ಸಂಖ್ಯೆ 12:** ಶ್ರೀ ಮಲ್ಲಿಕಾರ್ಜುನಯ್ಯ. ಎಂ, ಕಿರಿಯ ಸಹಾಯಕರು, ಇವರ ವಿರುದ್ಧ ದಾಖಲಾದ ಲಂಚ ಪ್ರಕರಣದ ಬಗ್ಗೆ ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸಿನ ಮೇರೆಗೆ ದಂಡನೆ ವಿಧಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ಮಲ್ಲಿಕಾರ್ಜುನಯ್ಯ ಎಂ, ಕಿರಿಯ ಸಹಾಯಕರು, ಇವರ ವಿರುದ್ಧ ದಾಖಲಾದ ಲಂಚ ಪ್ರಕರಣದ ಬಗ್ಗೆ ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸಿನ ಮೇರೆಗೆ ಯಾವ ದಂಡನೆ ವಿಧಿಸಬೇಕೆಂಬ

ಸ್ಪಷ್ಠ ಕಾನೂನು ಅಭಿಪ್ರಾಯ ಪಡೆದುಕೊಂಡು ಮುಂದಿನ ಸಿಂಡಿಕೇಟ್ ಸಭೆಗೆ ತಪ್ಪದೇ ಮಂಡಿಸಲು ಸಿಂಡಿಕೇಟ್ ಸೂಚಿಸಿತು.

*Proceedings of the 167th meeting of the Syndicate held on 24.01.2023*

**ವಿಷಯ ಸಂಖ್ಯೆ 13:** ಶ್ರೀ ಜಿ.ಎಲ್. ಶಿವಕುಮಾರ್, ಕಿರಿಯ ಸಹಾಯಕ ಇವರ ಮೇಲೆ ಶಿಸ್ತು ಕ್ರಮ ಜರುಗಿಸುವ ಬಗ್ಗೆ.

**ಮತ್ತು**

**ವಿಷಯ ಸಂಖ್ಯೆ 34: ಪೂರಕ ಟಿಪ್ಪಣಿ:–** ಶ್ರೀ ಜಿ.ಎಲ್ ಶಿವಕುಮಾರ್, ಕಿರಿಯ ಸಹಾಯಕ ಇವರ ಮೇಲೆ ಶಿಸ್ತು ಕ್ರಮ ಜರುಗಿಸುವ ಬಗ್ಗೆ.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, ನ್ಯಾಯಾಲಯದ ಆದೇಶ ಸಂಖ್ಯೆ: SPLCC No.143/2008 ದಿನಾಂಕ: 30–08–2014ರಲ್ಲಿ ಸದರಿ ಆರೋಪಿಯನ್ನು ದೋಷ ಮುಕ್ತಗೊಳಿಸಿರುವುದರಿಂದ ಸಿಂಡಿಕೇಟ್ ಪುನರ್ ವಿಚಾರಣೆ ನಡೆಸಿ ವಿಚಾರಣಾಧಿಕಾರಿಗಳಿಂದ ವರದಿ ಪಡೆದುಕೊಂಡು ಶಿಸ್ತು ಕ್ರಮ ಕೈಗೊಳ್ಳಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

ಕುಲಸಚಿವರು ಮಾತನಾಡಿ, ಮಾನ್ಯ ಉಪಲೋಕಾಯುಕ್ತ–2 ಅವರು ಈಗಾಗಲೇ ಕಡತದಲ್ಲಿ ಶಿಫಾರಸ್ಸು ನೀಡಿ ".., the Syndicate of Bangalore University cannot take decision to hold another departmental enquiry simply on the ground of acquittal in the criminal case" ಎಂದು ಅಭಿಪ್ರಾಯ ನೀಡಿದ್ದಾರೆ. ಲೋಕಾಯುಕ್ತ ಇಲಾಖಾ ವಿಚಾರಣೆಯಲ್ಲಿ ಲಂಚದ ಆರೋಪ ಸ್ಪಷ್ಟವಾಗಿ ಸಾಬೀತಾಗಿದೆ ಎಂದು ತಿಳಿಸಿರುವುದರಿಂದ, ಶಿಸ್ತುಪ್ರಾಧಿಕಾರ ಕ್ರಮ ಕೈಗೊಳ್ಳುವ ಬಗ್ಗೆ ನಿರ್ಧರಿಸಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ತಪ್ಪಿತಸ್ಥ ಸಿಬ್ಬಂದಿಯ ವಿರುದ್ಧ ಲೋಕಾಯುಕ್ತ ಶಿಫಾರಸ್ಸಿನ ಮೇಲೆ ಯಾವ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಿಂದ ಸ್ಪಷ್ಠ ಅಭಿಪ್ರಾಯವನ್ನು ಪಡೆದುಕೊಂಡು, ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ಸಿಂಡಿಕೇಟ್ ಸೂಚಿಸಿತು.

*Proceedings of the 167th meeting of the Syndicate held on 24.01.2023*

**Item No. 14:** Nomination of three experts in the subject and/or allied subjects to the faculty of Education, Bangalore University, Bangalore for re-constitution of the Faculty-reg.

***Resolution:***

The Syndicate resolved to nominate following three experts on the faculty of Education, Bangalore University, Bengaluru, for a period of two years:

1. Dr. Geetha C, Professor, Dept. of Education, Kuvempu University, Shakaraghatta, Shimogga-577 129.
2. Dr. Ningamma C Betsur, Professor, Dept. of Studies in Education, Manasa Gangothri, Mysuru-570 006.
3. Dr. Srinivasan, Professor & Chairman, Department of Physical Education, Sri Krishnadevaraya University, Anathapur, Andhra Pradesh-515 110.

***Proceedings of the 167th meeting of the Syndicate held on 24.01.2023***

**ವಿಷಯ ಸಂಖ್ಯೆ 15:** ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿರುವ ಸರ್ಕಾರಿ ನೌಕರರು ವೈದ್ಯರ ಸಲಹೆಯ ಮೇರೆಗೆ ಒಳಪಡುವ ಕಿಮೋ/ರೇಡಿಯೋಥೆರಪಿ ಚಿಕಿತ್ಸೆಯ ಪ್ರಕರಣಗಳಲ್ಲಿ ವಿಶೇಷ ಸಾಂದರ್ಭಿಕ ರಜೆಯ ಮಂಜೂರಾತಿಯ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿರುವ ಸರ್ಕಾರಿ ನೌಕರರು ವೈದ್ಯರ ಸಲಹೆಯ ಮೇರೆಗೆ ಒಳಪಡುವ ಕಿಮೋ/ರೇಡಿಯೋಥೆರಪಿ ಚಿಕಿತ್ಸೆಯ ಪ್ರಕರಣಗಳಲ್ಲಿ ವಿಶೇಷ' ಸಾಂದರ್ಭಿಕ ರಜೆಯ ಮಂಜೂರಾತಿಯನ್ನು, ವಿಶ್ವವಿದ್ಯಾಲಯದ ನೌಕರರಿಗೆ ವಿಸ್ತರಿಸಿ ಹೊರಡಿಸಲಾಗಿರುವ ಆದೇಶ ದಿನಾಂಕ:21.10.2022ನ್ನು ಸಿಂಡಿಕೇಟ್ ಅನುಸಮರ್ಥಿಸಿತು.

***Proceedings of the 167th meeting of the Syndicate held on 24.01.2023***

**ವಿಷಯ ಸಂಖ್ಯೆ 16:** ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಕರ್ಯ ನೀಡಿರುವುದಕ್ಕೆ ಹಣ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಈಗಾಗಲೇ ಹಿಂದಿನ ಸಾಲುಗಳಲ್ಲಿ ಆಯಾ ಸಾಲುಗಳಲ್ಲಿ ಪ್ರವೇಶ ಪಡೆದ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಕರ್ಯ ನೀಡಲು ಹಣ ಮಂಜೂರಾತಿ ಮಾಡಲಾಗಿರುತ್ತದೆ. ಆದುದರಿಂದ, ಪ್ರಸ್ತುತ ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವ 2018–19 ರಿಂದ 2022–23ನೇ ಸಾಲಿನವರೆಗೆ ಪ್ರವೇಶ ಪಡೆದಿದ್ದಾರೆನ್ನಲಾದ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಕರ್ಯ ನೀಡುವ ಸಂಬಂಧ ಹಣ ಮಂಜೂರು ಮಾಡುವ ಕುರಿತು ವಿತ್ತಾಧಿಕಾರಿಯವರಿಂದ ವರದಿ ಪಡೆದುಕೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು.

3/2/23

***Proceedings of the 167th meeting of the Syndicate held on 24.01.2023***

**ವಿಷಯ ಸಂಖ್ಯೆ 17:** ಪಿ.ಜಿ ಹಾಸ್ಟೆಲ್ ನಂ.1 2, 5 ಮತ್ತು ರಾಮನಗರ ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಿಗೆ ಆಗಸ್ಟ್–2021 ರಿಂದ ಮಾರ್ಚ್ 2022ರವರೆಗಿನ 08 ತಿಂಗಳವರೆಗೆ ಹೆಚ್ಚುವರಿಯಾಗಿ ಖರ್ಚಾಗಿರುವ ಊಟದ ವೆಚ್ಚ ರೂ. 31,28,095/– ಗಳನ್ನು ಮಂಜೂರು ಮಾಡುವುದರ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಪಿ.ಜಿ ಹಾಸ್ಟೆಲ್ ನಂ.1 2, 5 ಮತ್ತು ರಾಮನಗರ ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಿಗೆ ಆಗಸ್ಟ್–2021 ರಿಂದ ಮಾರ್ಚ್ 2022ರವರೆಗಿನ 08 ತಿಂಗಳ ಅವಧಿಯಲ್ಲಿ ನಿಗದಿತ ದರಕ್ಕಿಂತ ಹೆಚ್ಚುವರಿಯಾಗಿ ಖರ್ಚು ಮಾಡಿರುವ ಊಟದ ವೆಚ್ಚ ರೂ.31,28,095/– ಗಳನ್ನು ಮಂಜೂರು ಮಾಡುವ ಬಗ್ಗೆ ವಿತ್ತಾಧಿಕಾರಿಯವರಿಂದ ನಿಯಮಾನುಸಾರ ಪರಿಶೀಲಿಸಿ ವರದಿ ಪಡೆದುಕೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು.

***Proceedings of the 167th meeting of the Syndicate held on 24.01.2023***

**ವಿಷಯ ಸಂಖ್ಯೆ 18:** ವಿಶ್ವವಿದ್ಯಾಲಯದ ಪರವಾಗಿ ವಿವಿಧ ನ್ಯಾಯಾಲಯಗಳಲ್ಲಿ ವಾದವನ್ನು ಮಂಡಿಸುವ ವಕೀಲರ ಪಟ್ಟಿಯನ್ನು ಬದಲಾಯಿಸುವ ಕುರಿತು.

**ನಿರ್ಣಯ:**

ಚರ್ಚೆಯ ನಂತರ, ಪರಾಮರ್ಶಿತ ಟಿಪ್ಪಣಿ ಹಾಗೂ ಪೂರಕ ಟಿಪ್ಪಣಿಯಲ್ಲಿ ಮಂಡಿಸಿರುವ ಪಟ್ಟಿಯಿಂದ ವಕೀಲರುಗಳನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ ಕಾನೂನು ಸಲಹೆಗಾರರೊಂದಿಗೆ ಸಮಾಲೋಚಿಸಿ ನಿರ್ಧಾರ ತೆಗೆದುಕೊಳ್ಳಲು ಸಿಂಡಿಕೇಟ್ ಕುಲಪತಿಗಳಿಗೆ ಅಧಿಕರಿಸಿತು.

ಮುಂದುವರೆದು, ಶ್ರೀ ರಾಜೇಂದ್ರ ಕುಮಾರ್ ಸುಂಗೆ ಮತ್ತು ಶ್ರೀ ಬಿ ರಮೇಶ್ ಇವರುಗಳಿಗೆ ಮುಂದೆ ಯಾವುದೇ ಪ್ರಕರಣವನ್ನು ನೀಡದೇ ಇರಲು ಸಿಂಡಿಕೇಟ್ ನಿರ್ಣಯಿಸಿತು.

***Proceedings of the 167th meeting of the Syndicate held on 24.01.2023***

**ವಿಷಯ ಸಂಖ್ಯೆ 19:** ಶ್ರೀ ಕೆ. ರಾಮಮೂರ್ತಿ, ಸಮನ್ವಯಾಧಿಕಾರಿ, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ ರವರ ತಾತ್ಕಾಲಿಕ ಸೇವೆಯನ್ನು ಕೊನೆಗೊಳಿಸುವ/ಮುಂದುವರೆಸುವ ಕುರಿತು.

ವಿಶ್ವವಿದ್ಯಾಲಯದ ಸೂಚನಾ ಪತ್ರಕ್ಕೆ ಶ್ರೀ ಕೆ. ರಾಮಮೂರ್ತಿ ಅವರು, ಅವರ ಜನ್ಮ ದಿನಾಂಕದ ಬಗ್ಗೆ ಯಾವುದೇ ಮೂಲ ದಾಖಲೆಗಳನ್ನು ಒದಗಿಸಿರುವುದಿಲ್ಲ ಹಾಗೂ ಈಗಾಗಲೇ ಸಲ್ಲಿಸಿರುವ ದಾಖಲೆಗಳು ನೈಜತೆಯಿಂದ ಕೂಡಿರುವುದಿಲ್ಲವೆಂಬ ಅಂಶವನ್ನು ಸಿಂಡಿಕೇಟ್ ಗಮನಕ್ಕೆ ತರಲಾಯಿತು.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ಕೆ. ರಾಮಮೂರ್ತಿ, ಸಮನ್ವಯಾಧಿಕಾರಿ, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ ಇವರ ತಾತ್ಕಾಲಿಕ ಸೇವೆಯು ವಿಶ್ವವಿದ್ಯಾಲಯಕ್ಕೆ ಅವಶ್ಯಕತೆ ಇರದ ಕಾರಣ ಇವರನ್ನು ವಿಶ್ವವಿದ್ಯಾಲಯದ ತಾತ್ಕಾಲಿಕ ಸೇವೆಯಿಂದ ಬಿಡುಗಡೆ ಮಾಡಲು ಸಿಂಡಿಕೇಟ್ ನಿರ್ಣಯಿಸಿತು.

***Proceedings of the 167th meeting of the Syndicate held on 24.01.2023***

**Item No. 20:** To re-consider proceedings of the Library Committee –reg.

Dr. Sudhakara H and Mr. Udaya Kumar M, expressed that the members of the Syndicate who are on the Library Committee have not been given prior information about the meeting of the Library Committee. In view of this, they could not be able to attend the meeting. The meeting was conducted and decisions were taken in the absence of the members. Therefore, the proceedings have to be reviewed. Further, they urged that all the activities/works of the University Library should be conducted under the supervision of a senior faculty.

***Resolution:***

After detailed discussion, the Syndicate resolved that all the files related to University Library should be routed through Prof. Ramesha, Dept. of Library & Information Science and further the Syndicate resolved to authorize him to convene the meeting of the Library Committee in order to review the decision of the Library Committee meeting held on 16-05-2022. The orders be issued to this effect immediately.

***Proceedings of the 167th meeting of the Syndicate held on 24.01.2023***

**Item No. 21:** Promotion under CAS to Dr. B.R. Radhakrishna, Deputy Librarian as Librarian.

***Resolution:***

After detailed discussions, the Syndicate resolved to approve the proceedings of the Selection Committee meeting in Libarary Science held on 07-06-2022 and to extend promotion under CAS scheme to Dr. B.R. Radhakrishna, Deputy Librarian as **Librarian on supernumerary basis w.e.f. 19.02.2021.**

**ವಿಷಯ ಸಂಖ್ಯೆ22:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿನ ಶಾಸನಬದ್ಧ ಅಧಿಕಾರಿಗಳು, ವಿವಿಧ ಅಧ್ಯಯನ ಕೇಂದ್ರ ಮತ್ತು ಘಟಕಗಳಿಗೆ ನಿರ್ದೇಶಕರು, ವಿಶೇಷಾಧಿಕಾರಿಗಳು ಹಾಗೂ ಸಂಯೋಜಕರುಗಳನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ:**

ಸುದೀರ್ಘ ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿನ ಶಾಸನಬದ್ಧ ಅಧಿಕಾರಿಗಳು, ವಿವಿಧ ಅಧ್ಯಯನ ಕೇಂದ್ರ ಮತ್ತು ಘಟಕಗಳಿಗೆ ನಿರ್ದೇಶಕರು, ವಿಶೇಷಾಧಿಕಾರಿಗಳು ಹಾಗೂ ಸಂಯೋಜಕರುಗಳನ್ನು ಕೆಳಕಂಡಂತೆ ನೇಮಿಸಲು ಸಿಂಡಿಕೇಟ್ ನಿರ್ಣಯಿಸಿತು.

| Sl. No. | Department/Centre | Teacher |
|---|---|---|
| 1. | Director, College Developmental Council | **Prof. Ashok Hanjagi,** Dept. of Geography |
| 2. | Director, Prasaranga & Printing Press | **Prof. M. Narayanaswamy,** Dept. of Education, |
| 3. | Director, Students Welfare | **Prof. Ramakrishnaiah. K,** Dept. of Performing Arts |
| 4. | Director, Dr. B.R. Ambedkar Study & Research Centre | **Prof. Honnu Siddarth, C.B,** Centre for Kannada Studies |
| 5. | Director, HRDC | **Prof. Srinivas C,** Dept. of Microbiology (to continue) |
| 6. | Director, IQAC | **Prof. Parameshwar V. Pandit,** Dept. of Statistics (to continue) |
| 7. | Director, IT Centre | **Prof. N. Malarkodi** Dept. of Geology |
| 8. | Director, Pre-examn. Coaching Centre | **Prof. Sreekeerthy B.N.,** Dept. of English |
| 9. | Director, International Centre | **Prof. M. Hanumanthappa,** Dept. of MCA |
| 10. | Director, Yoga Centre | **Prof. S.N. Susheela,** Dept. of Performing Arts, |
| 11. | Special Officer, SC/ST Cell | **Prof. P.C. Nagesh,** Dept. of Geology |
| 12. | Co-ordinator, Biopark | **Dr. S.T. Girisha,** Dept. of Microbiology |
| 13. | Director, Gandhian Studies | **Prof. Nagabhushana C** Centre for Kannada Studies |
| 14. | Co-ordinator, Basavalingappa Study Centre | **Prof. T.H.Murthy,** Centre for Rural Development |
| 15. | Director, Nadaprabhu Kempegowda Centre for Humanities & Social Sc. | **Prof. Puttaswamaiah** Dept. of Economics |

| | | |
|---|---|---|
| 16. | Director, Jagajeevan Ram Study Centre | **Prof. Gangadhara B**<br>Centre for Kannada Studies |
| 17. | Special Officer, Backward Class Cell (OBC) | **Dr. Chittaiah Pujar,**<br>Centre for Kannada Studies |
| 18. | Director, Ramanagar PG Centre | **Prof. Jayaramanayak K G**<br>Dept. of Library and Information Sc. |
| 19. | Director, Centre for Skill Development | **Prof. K. Nirmala,**<br>Dept. of Commerce |
| 20. | Director, PWD and Equal Opportunity Cell | **Dr. Rajeshwari R**<br>Dept. of Electronic Media |
| 21. | Director, Allampalli Venkataram Labor Research Chair | **Prof. V. Sudesh,**<br>University Law College |
| 22. | Director, DCC & DE | **Deferred** |



**ವಿಷಯ ಸಂಖ್ಯೆ23:** ಅನುಕಂಪ ಆಧಾರದ ಮೇಲೆ ಗ್ರೂಪ್ 'ಡಿ'ಹುದ್ದೆಗೆ ನೇಮಕಾತಿ ಹೊಂದಿರುವ 04 ಜನ ನೌಕರರಲ್ಲಿ 03 ಜನ ನೌಕರರಿಗೆ ದಿನಾಂಕ 26.08.2022 ರ ಆದೇಶದಲ್ಲಿ ಗ್ರೂಫ್ 'ಸಿ'ಹುದ್ದೆಯ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ಪರಿಗಣಿಸಿ, ವೇತನವನ್ನು ನಿಗದಿಪಡಿಸಿರುವ ಆದೇಶವನ್ನು ಅನುಸಮರ್ಥನೆಗಾಗಿ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 31882/2019 ರ ಆದೇಶ ದಿನಾಂಕ 05.12.2022 ರಲ್ಲಿ ಶ್ರೀಮತಿ ಕುಸುಮ್ ರಾಮಚಂದ್ರನ್ ರವರಿಗೆ ನೇಮಕಾತಿ ದಿನಾಂಕದಿಂದ ಗ್ರೂಪ್ 'ಸಿ'ಹುದ್ದೆಯನ್ನು ನೀಡುವ ಮನವಿಯನ್ನು ಮರು ಪರಿಗಣಿಸುವಂತೆ ಆದೇಶಿಸಿರುವ ಬಗ್ಗೆ.

**ನಿರ್ಣಯ:**

ಮಾನ್ಯ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 31882/2019 ರ ಆದೇಶ ದಿನಾಂಕ 05.12.2022 ರಲ್ಲಿ ಶ್ರೀಮತಿ ಕುಸುಮ್ ರಾಮಚಂದ್ರನ್ ರವರಿಗೆ ನೇಮಕಾತಿ ದಿನಾಂಕದಿಂದ ಗ್ರೂಪ್ 'ಸಿ'ಹುದ್ದೆಯನ್ನು ನೀಡುವ ಮನವಿಯನ್ನು ಮರು ಪರಿಗಣಿಸುವಂತೆ ಆದೇಶಿಸಿರುವುದರಿಂದ ಅವರು ನೇಮಕಾತಿ ಹೊಂದಿದ ದಿನಾಂಕದಿಂದ ಕಿರಿಯ ಸಹಾಯಕ ಹುದ್ದೆಗೆ ಪರಿಗಣಿಸಿ, ವೇತನ ಶ್ರೇಣಿಯನ್ನು ಕಾಲ್ಪನಿಕವಾಗಿ ನಿಗದಿಪಡಿಸಿ ಹಣಕಾಸು ಸೌಲಭ್ಯವನ್ನು ದಿನಾಂಕ: 18-02-2022ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಲು ಅನುಮೋದಿಸಿ ಹಾಗೂ ದಿನಾಂಕ: 26-08-2022ರಂದು ಮೂರು ಜನ ಗ್ರೂಪ್ 'ಡಿ' ನೌಕರರಿಗೆ ಗ್ರೂಪ್ 'ಸಿ' ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ಪರಿಗಣಿಸಿ ವೇತನ ನಿಗದಿಪಡಿಸಿರುವ ವಿಶ್ವವಿದ್ಯಾಲಯದ ಆದೇಶವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

ಮುಂದುವರೆದು, ಶ್ರೀಮತಿ ಕುಸುಮ್ ರಾಮಚಂದ್ರನ್ ಅವರು ಬೆಂಗಳೂರು ವಿಶ್ವವಿದ್ಯಾಲಯದ ಸೇವೆಗೆ ಹಾಜರಾದ ದಿನಾಂಕ: 03-09-2018ರಿಂದ ಒಟ್ಟು 966 ದಿನಗಳು ಗೈರು ಹಾಜರು ಆಗಿರುವುದರಿಂದ, ಅವರ

ಮೇಲೆ ವಿಚಾರಣೆ ನಡೆಸಲು ದೋಷಾರೋಪ ಪಟ್ಟಿ ಸಿದ್ಧಪಡಿಸಲು ಮತ್ತು ಕೆಳಕಂಡ ವಿಚಾರಣಾಧಿಕಾರಿಯನ್ನು ನೇಮಕ ಮಾಡಲು ಕೆಳಕಂಡ ಸಮಿತಿಯನ್ನು ನೇಮಿಸಿತು:

1. ಪ್ರೊ. ಸಿಂಥಿಯಾ ಮೆನೇಜಸ್ ಡೀನರು ವಾಣಿಜ್ಯ ನಿಕಾಯ – ಅಧ್ಯಕ್ಷರು
2. ಕಾನೂನು ಸಲಹೆಗಾರರು – ಮಂಡನಾಧಿಕಾರಿ

***Proceedings of the 167th meeting of the Syndicate held on 24.01.2023***

**ವಿಷಯ ಸಂಖ್ಯೆ 24:** ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ರವರ ಇ–ಮೇಲ್ ಪತ್ರ ದಿನಾಂಕ 17.11.2022 ಮತ್ತು NSE ಕಂಪನಿಯ ಪತ್ರ ದಿನಾಂಕ 23.11.2022 ರ ಅನ್ವಯ ಸ್ನಾತಕ ಪದವಿ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಣೆ ಮತ್ತು ಪ್ರತಿ ವಿದ್ಯಾರ್ಥಿಗೆ ರೂ. 150/– ಅನ್ನು ಸಂಗ್ರಹಿಸುವ ಕುರಿತು ಸಿಂಡಿಕೇಟ್ ಪ್ರಾಧಿಕಾರದ ಅನುಮೋದನೆ ಬಗ್ಗೆ.

**ನಿರ್ಣಯ:**

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ನೇತೃತ್ವದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಹಾಗೂ NSE Academy ಯೊಂದಿಗೆ ಮಾಡಲಾದ ಒಡಂಬಡಿಕೆಯಂತೆ Financial Education Investment Awareness ಪತ್ರಿಕೆಯನ್ನು ಬಿ.ಕಾಂ. ಪದವಿ ತರಗತಿಗಳ 3 ಅಥವಾ 4ನೇ ಸೆಮಿಸ್ಟರ್‌ನ ಮುಕ್ತ ಆಯ್ಕೆಯ ವಿಷಯಗಳಲ್ಲಿ ಒಂದಾಗಿ ಭೋದಿಸಲು ಸಿಂಡಿಕೇಟ್ ಅನುಮೋದಿಸಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ದಿನಾಂಕ: 07–12–2022ರ ಈ ಮೇಲ್ ಪತ್ರದಲ್ಲಿ ತಿಳಿಸಿರುವಂತೆ, ಸದರಿ ಕೋರ್ಸಿಗೆ ಪ್ರತಿ ವಿದ್ಯಾರ್ಥಿಯಿಂದ ರೂ.150/–ಗಳ ಶುಲ್ಕವನ್ನು ನಿಗದಿಪಡಿಸಿ ಶುಲ್ಕವನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಸಂದಾಯಿಸಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 167th meeting of the Syndicate held on 24.01.2023***

**Item No. 25:** Renovation and up-gradation of Senate Hall at Administrative Block, Jnana Bharathi Campus, Bangalore University, Bengaluru.

***Resolution:***

After detailed discussion, the Syndicate resolved to approve the proposal for renovation and up-gradation of Senate Hall at Administrative Block, Jnana Bharathi Campus, Bangalore University, Bengaluru at a cost of Rs.1,76,51,000/- (Rupees one Crore Seventy Six lakhs fifty one thousand) and to entrust the work to Bengaluru Nirmiti Kendra, Bengaluru.

|M 3/2/23

**ವಿಷಯ ಸಂಖ್ಯೆ 26:** ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಕೆಳಕಂಡ ವಿಭಾಗಗಳಿಗೆ ಅವುಗಳ ಮುಂದೆ ನಮೂದಿಸಿರುವ ಶಿಕ್ಷಕರನ್ನು ತಿಳಿಸಲಾಗಿರುವ ದಿನಾಂಕದಿಂದ ಜಾರಿಗೆ ಬರುವಂತೆ ಎರಡು ವರ್ಷದ ಅವಧಿಗೆ ಅಧ್ಯಕ್ಷರು/ಸಂಯೋಜಕರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಅನುಮೋದಿಸಿತು.

| ಕ್ರ.ಸಂ. | ವಿಭಾಗ | ಶಿಕ್ಷಕರ ಹೆಸರು | ದಿನಾಂಕ |
|---|---|---|---|
| 1. | ಭೌತಶಾಸ್ತ್ರ ವಿಭಾಗ | ಪ್ರೊ. ಎಂ.ಕೆ. ಕೋಕಿಲ | 30-01-2023 |
| 2. | ಸ್ನಾತಕೋತ್ತರ ವಿಭಾಗ ವಿಶ್ವವಿದ್ಯಾಲಯ ಕಾನೂನು ಕಾಲೇಜು | ಪ್ರೊ. ವಿ. ಸುದೇಶ್ | 30-01-2023 |
| 3. | ಸೂಕ್ಷ್ಮ ಜೀವಶಾಸ್ತ್ರ ಮತ್ತು ಜೀವತಂತ್ರಜ್ಞಾನ ವಿಭಾಗ | ಪ್ರೊ. ಕೆ.ಜೆ ತಾರಾಸರಸ್ವತಿ | 01-03-2023 |
| 4. | ಭೂಗರ್ಭಶಾಸ್ತ್ರ ವಿಭಾಗ | ಪ್ರೊ ಎನ್. ಮಲಾರ್‌ಕೋಡಿ | 01-03-2023 |
| 5. | ಪರಿಸರ ವಿಜ್ಞಾನ ವಿಭಾಗ | ಪ್ರೊ. ಕೆ.ಎಲ್. ಪ್ರಕಾಶ್ | 01-04-2023 |
| 6. | ವಾಣಿಜ್ಯಶಾಸ್ತ್ರ ವಿಭಾಗ | ಪ್ರೊ. ಆರ್. ಸರ್ವಮಂಗಳ | 01-04-2023 |
| 7. | ರಾಜ್ಯಶಾಸ್ತ್ರ ವಿಭಾಗ | ಪ್ರೊ ಎಸ್.ವೈ. ಸುರೇಂದ್ರಕುಮಾರ್ | 01-04-2023 |
| 8. | ಮನಃಶಾಸ್ತ್ರ ವಿಭಾಗ | ಪ್ರೊ. ಶ್ರೀನಿವಾಸ್ ಎಂ | 01-04-2023 |
| 9. | ಪ್ರದರ್ಶನ ಕಲಾ ವಿಭಾಗ | ಪ್ರೊ. ಕೆ. ರಾಮಕೃಷ್ಣಯ್ಯ | 01-04-2023 |
| 10. | ಗಣಿತಶಾಸ್ತ್ರ ವಿಭಾಗ | ಪ್ರೊ. ಹೆಚ್.ಜಿ. ನಾಗರಾಜ | 23-04-2023 (ಅಲ್ಲಿಯವರೆಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧ್ಯಕ್ಷರೇ ಮುಂದುವರೆಯುವರು) |
| 11. | ಅರ್ಥಶಾಸ್ತ್ರ ವಿಭಾಗ | ಪ್ರೊ. ಎಸ್.ಆರ್. ಕೇಶವ | 23-04-2023 (ಅಲ್ಲಿಯವರೆಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧ್ಯಕ್ಷರೇ ಮುಂದುವರೆಯುವರು) |
| 12. | ಎಲೆಕ್ಟ್ರಾನಿಕ್ ಮೀಡಿಯಾ (ಸಂಯೋಜಕರು) | ಡಾ. ಆರ್. ರಾಜೇಶ್ವರಿ | 01-04-2023 |
| 13. | ಸಮಾಜಕಾರ್ಯ ವಿಭಾಗ | ಪ್ರೊ. ಸಮತಾ ಬಿ ದೇಶಮಾನೆ, ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ ಇವರನ್ನು ಸಮಾಜಕಾರ್ಯ ವಿಭಾಗಕ್ಕೆ ದಿ:01-05-2023ರಿಂದ ಜಾರಿಗೆ ಬರುವಂತೆ, ಅಧ್ಯಕ್ಷರನ್ನಾಗಿ ನೇಮಿಸಲು ಸಿಂಡಿಕೇಟ್ ನಿರ್ಣಯಿಸಿತು. ಮುಂದುವರೆದು, ಪ್ರಸ್ತುತ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ವೇದ ಸಿ.ವಿ. ಅವರು ಅಧ್ಯಕ್ಷರ ಅಧೀನದಲ್ಲಿ, ಸಂಯೋಜಕರಾಗಿ ಕಾರ್ಯನಿರ್ವಹಿಸತಕ್ಕದ್ದು. | |
| 14. | ಪ್ರಾಣಿಶಾಸ್ತ್ರ ವಿಭಾಗ | ಪ್ರೊ. ಎಸ್. ರಾಮಕೃಷ್ಣ | 01-05-2023 |
| 15. | ಅನ್ವಯಿಕ ತಳಿಶಾಸ್ತ್ರ (ಸಂಯೋಜಕರು) | ಪ್ರೊ. ಬಿ.ಪಿ. ಹರಿಣಿ | 01-05-2023 |

14 31/1/23

***Proceedings of the 167th meeting of the Syndicate held on 24.01.2023***

**ವಿಷಯ ಸಂಖ್ಯೆ 27:** ಬೆಂಗಳೂರು ವಿಶ್ವವಿದ್ಯಾಲಯದ ಅಭಿಯಂತರರ ವಿಭಾಗದಲ್ಲಿ ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ/ಕಿರಿಯ ಅಭಿಯಂತರರು (ಸಿವಿಲ್/ಎಲೆಕ್ಟ್ರಿಕಲ್) ಹಾಗೂ ಸೈಟ್ ಇಂಜಿನಿಯರ್ ರವರುಗಳ ಸೇವೆಯನ್ನು ಮುಂದುವರೆಸುವ ಬಗ್ಗೆ.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಶ್ರೀ ಎನ್ ಭಾಸ್ಕರ್, ಸೈಟ್ ಇಂಜಿನಿಯರಿಂಗ್, ಅವರಿಗೆ ಅವೈಜ್ಞಾನಿಕವಾಗಿ ವೇತನವನ್ನು ನಿಗದಿಪಡಿಸಿರುತ್ತಾರೆ ಹಾಗೂ ಅವರ ಸೇವೆಯ ಅವಶ್ಯಕತೆ ಇರುವುದಿಲ್ಲ, ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಮೂವರು ಸಹಾಯಕ/ಕಿರಿಯ ಅಭಿಯಂತರರು ನಿಯೋಜನೆ ಖಾಯಂ ಆಗಿ ಸರ್ಕಾರದಿಂದ/ ಇತರ ವಿಶ್ವವಿದ್ಯಾಲಯಗಳಿಂದ ವರ್ಗಾವಣೆ ಹೊಂದಿರುತ್ತಾರೆ ಮತ್ತು ಅವರ ಸೇವೆಯನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಇದಲ್ಲದೇ ಗುತ್ತಿಗೆ ಆಧಾರದ ಮೇಲೆ ನಾಲ್ಕು ಜನ ಸಹಾಯಕ/ಕಿರಿಯ ಅಭಿಯಂತರರು ಕಾರ್ಯನಿರ್ವಹಿಸುತ್ತಿರುವ ಅವರ ಸೇವೆಯನ್ನೇ ಉಪಯೋಗಿಸಿಕೊಳ್ಳಬಹುದಾಗಿದೆ. ಆರ್ಥಿಕ ಹೊರೆಯನ್ನು ತಗ್ಗಿಸಲು ಅವರನ್ನು ಹೊರಗುತ್ತಿಗೆ ಸೇವೆಯಿಂದ ಕೂಡಲೇ ಬಿಡುಗಡೆ ಮಾಡಬೇಕೆಂದು ತಿಳಿಸಿದರು.

ಶ್ರೀ ಉದಯ ಕುಮಾರ ಎಂ ಅವರು ಮಾತನಾಡಿ, ಶ್ರೀ ರೇವಣ್ಣ ಅವರು 14 ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಸಹಾಯಕ ಅಭಿಯಂತರರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರು ನುರಿತ ಅನುಭವ ಹೊಂದಿರುವುದರಿಂದ ಸಹಾಯಕ ಅಭಿಯಂತರರಿಗೆ ನಿಗದಿಪಡಿಸಿರುವ ಮೂಲವೇತನಕ್ಕೆ ರೂ.10/- ಅನ್ನು ಕಡಿತಗೊಳಿಸಿ ಅವರ ವೇತನವನ್ನು ನಿಗದಿಪಡಿಸಿ ಅವರ ಸೇವೆಯನ್ನು ಮುಂದುವರೆಸಬೇಕೆಂದು ಅಥವಾ ಅವರನ್ನು ಸಂಚಿತವೇತನ ನೌಕರರ ಪಟ್ಟಿಗೆ ಸೇರ್ಪಡೆಗೊಳಿಸಬೇಕೆಂದು ಒತ್ತಾಯಿಸಿದರು.

ಕುಲಪತಿಗಳು ಮಾತನಾಡಿ, ಈಗಾಗಲೇ ಇಬ್ಬರು ಸಹಾಯಕ ಅಭಿಯಂತರರು ವರ್ಗಾವಣೆಯಾಗಿ ಬಂದಿದ್ದಾರೆ. ಶ್ರೀ ರೇವಣ್ಣ ಅವರ ವೇತನದ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಸಿಂಡಿಕೇಟ್ ಸಭೆಗೆ ಮಂಡಿಸಲು ಸೂಚಿಸಲಾಗುವುದೆಂದು ತಿಳಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ನಡೆಯುತ್ತಿರುವ ಕಾಮಗಾರಿಗಳನ್ನು ಗಮನದಲ್ಲಿಟ್ಟುಕೊಂಡು, ಬೆಂಗಳೂರು ವಿಶ್ವವಿದ್ಯಾಲಯದ ಅಭಿಯಂತರರ ವಿಭಾಗದಲ್ಲಿ ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಕೆಳಕಂಡ ಸಹಾಯಕ/ಕಿರಿಯ ಅಭಿಯಂತರರು (ಸಿವಿಲ್/ಎಲೆಕ್ಟ್ರಿಕಲ್) ಇವರುಗಳ ಸೇವೆಯನ್ನು ಮೂರು ಕಾರ್ಯ ನಿರತ ದಿನಗಳ ಬಿಡುವು ನೀಡಿ ದಿನಾಂಕ: 15-09-2022ರಿಂದ ಜಾರಿಗೆ ಬರುವಂತೆ 11 ತಿಂಗಳ ಅವಧಿಗೆ ಮುಂದುವರೆಸಲು ಅನುಮೋದಿಸಿ ಹಾಗೂ ಸದರಿ ನೌಕರರಿಗೆ ಸೆಪ್ಟಂಬರ್ 2022 ರಿಂದ ಡಿಸೆಂಬರ್ 2022ರ ಅವಧಿಗೆ ಕ್ರೋಢೀಕೃತ ವೇತನವನ್ನು ಮಂಜೂರು ಮಾಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

1. ಶ್ರೀ ರೇವಣ್ಣ ಬಿ, ಸಹಾಯಕ ಅಭಿಯಂತರರು

2. ಶ್ರೀ ಶ್ರೀನಿವಾಸ ಮೂರ್ತಿ ಹೆಚ್.ಆರ್, ಕಿರಿಯ ಅಭಿಯಂತರರು
3. ಶ್ರೀಮತಿ ಸಂಧ್ಯಾವಲ್ಲಿ, ಕಿರಿಯ ಅಭಿಯಂತರರು
4. ಶ್ರೀಮತಿ ಹೀನಾ ಅಫ್ಷಘ್ ಅಲಿ, ಕಿರಿಯ ಅಭಿಯಂತರರು

ಮುಂದುವರೆದು, ಯು.ವಿ.ಸಿ.ಇ. ಕಾಲೇಜಿನಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ ಭಾಸ್ಕರ್ ಎನ್., ಸೈಟ್ ಇಂಜಿನಿಯರ್ ಅವರ ಸೇವೆಯನ್ನು ದಿನಾಂಕ: 15-09-2022ರಿಂದ ಜನವರಿ 31, 2023ರ ವರೆಗೆ ಮಾತ್ರ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 167th meeting of the Syndicate held on 24.01.2023***

**ವಿಷಯ ಸಂಖ್ಯೆ 28:** ಶ್ರೀಮತಿ ರತ್ನಮ್ಮ ಕೋ-ಲೇಟ್ ಲಿಂಗಪ್ಪ ನಿವೃತ್ತ ಹೊರಗುತ್ತಿಗೆ ನೌಕರರು ಯು.ವಿ.ಸಿ.ಇ ವಿದ್ಯಾರ್ಥಿನಿಲಯ ಇವರಿಗೆ ಕಾರ್ಮಿಕ ನ್ಯಾಯಾಲಯದ ಆದೇಶದಂತೆ ಉಪಧನ ಪಾವತಿಸಲು ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ ಹೊರಡಿಸಲಾಗಿರುವ ಆದೇಶವನ್ನು ಅನುಸಮರ್ಥಿಸುವ ಬಗ್ಗೆ.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಶ್ರೀಮತಿ ರತ್ನಮ್ಮ ಕೋ-ಲೇಟ್ ಲಿಂಗಪ್ಪ ನಿವೃತ್ತ ಹೊರಗುತ್ತಿಗೆ ನೌಕರರು, ಯು.ವಿ.ಸಿ.ಇ ವಿದ್ಯಾರ್ಥಿನಿಲಯ ಇವರಿಗೆ ಉಪಧನ ನೀಡುವ ಬಗ್ಗೆ ಕಾರ್ಮಿಕ ನ್ಯಾಯಾಲಯದ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಕಾರ್ಮಿಕ ನ್ಯಾಯಾಲಯದ ಆದೇಶದ ಅನ್ವಯ ಉಪಧನವನ್ನು ಪಾವತಿಸಲಾಗಿದ್ದು, ಅನುಸಮರ್ಥನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಶ್ರೀಮತಿ ರತ್ನಮ್ಮ ಕೋ-ಲೇಟ್ ಲಿಂಗಪ್ಪ ನಿವೃತ್ತ ಹೊರಗುತ್ತಿಗೆ ನೌಕರರು, ಯು.ವಿ.ಸಿ.ಇ ವಿದ್ಯಾರ್ಥಿನಿಲಯ ಇವರಿಗೆ ಕಾರ್ಮಿಕ ನ್ಯಾಯಾಲಯದ ಆದೇಶದಂತೆ ಉಪಧನ ಪಾವತಿಸಿ ಹೊರಡಿಸಲಾಗಿರುವ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ ಇಎಸ್‌ಟಿ-1:ಇ2:ಹಾಸ್ಟೆಲ್:47:2000-2022 ದಿನಾಂಕ: 28-12-2022ರ ಆದೇಶವನ್ನು ಅನುಸಮರ್ಥಿಸಿತು.

***Proceedings of the 167th meeting of the Syndicate held on 24.01.2023***

**ವಿಷಯ ಸಂಖ್ಯೆ 29:** ದಿನಾಂಕ 07.12.2022 ಮತ್ತು 28.12.2022 ರಂದು ನಡೆದ ಕೇಂದ್ರ ಖರೀದಿ ಸಮಿತಿ ಸಭೆಯ ನಡಾವಳಿಯ ಅನುಮೋದನೆ ಕುರಿತು.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 07.12.2022 ಮತ್ತು 28.12.2022 ರಂದು ನಡೆದ ಕೇಂದ್ರ ಖರೀದಿ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಿತು.

Proceedings of the 167th meeting of the Syndicate held on 24.01.2023

**ವಿಷಯ ಸಂಖ್ಯೆ 30:** ಶ್ರೀ ಚಂದ್ರಶೇಖರಪ್ಪ, ಸಹಾಯಕರು, ವಿದ್ಯಾಕಾರ್ಯ ಶಾಖೆ-1 ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆಗಾಗಿ ಖರ್ಚು ಮಾಡಿರುವ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

Proceedings of the 167th meeting of the Syndicate held on 24.01.2023

**Item No. 31:** Dr. N. Lakshmanaswamy, Professor, Department of Mechanical Engineering U.V.C.E requesting for VRS (Voluntary Retirement from Service) from Bangalore University service.

***Resolution:***

After detailed discussion, the Syndicate considered the request of Dr. N. Lakshmanaswamy, Professor, Department of Mechanical Engineering, U.V.C.E and resolved to permit him to get VRS (Voluntary Retirement from Service) from Bangalore University services as per KCSR rule no.285(1)(a) w.e.f. 01-02-2023.

Proceedings of the 167th meeting of the Syndicate held on 24.01.2023

**ವಿಷಯ ಸಂಖ್ಯೆ 32:** ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಆಧ್ಯಯನ ವಿಭಾಗಗಳಲ್ಲಿ 2022-23ನೇ ಸಾಲಿಗೆ ಪೇಮೆಂಟ್ ಕೋಟಾದಡಿಯಲ್ಲಿ ಹೆಚ್ಚುವರಿಯಾಗಿ ಪ್ರವೇಶ ಮಾಡಿರುವ ವಿದ್ಯಾರ್ಥಿ ಪ್ರಮಾಣವನ್ನು ಅನುಸಮರ್ಥಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಆಧ್ಯಯನ ವಿಭಾಗಗಳಲ್ಲಿ 2022-23ನೇ ಸಾಲಿಗೆ ಪೇಮೆಂಟ್ ಕೋಟಾದಡಿಯಲ್ಲಿ ವಿದ್ಯಾರ್ಥಿ ಪ್ರವೇಶವನ್ನು ಹೆಚ್ಚಿಸಿ ಹೊರಡಿರುವ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಎಸಿಎ-4/ಹೆ.ಪ್ರ/2022-23 ದಿನಾಂಕ: 19-12-2022ರನ್ನು ಸಿಂಡಿಕೇಟ್ ಅನುಸಮರ್ಥಿಸಿತು.

Proceedings of the 167th meeting of the Syndicate held on 24.01.2023

**ವಿಷಯ ಸಂಖ್ಯೆ 33:** ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ನಾಡೋಜ ಡಾ. ಹೆಚ್ ನರಸಿಂಹಯ್ಯ ರವರ ಪುತ್ಥಳಿಯನ್ನು ಸ್ಥಾಪಿಸುವ ಬಗ್ಗೆ.

ಡಾ. ಸುಧಾಕರ ಹೆಚ್ ವರು ಮಾತನಾಡಿ, ಆದಷ್ಟು ಬೇಗ ಜ್ಞಾನಭಾರತಿ ಆವರಣದಲ್ಲಿ ನಾಡೋಜ ಡಾ. ಹೆಚ್ ನರಸಿಂಹಯ್ಯ ರವರ ಪುತ್ಥಳಿಯನ್ನು ಸ್ಥಾಪಿಸಲು ಒತ್ತಾಯಿಸಿದರು.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ: 13-09-2022ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ಡಾ. ಹೆಚ್.ಎನ್. ಸಭಾಂಗಣದ ಮುಂಭಾಗದಲ್ಲಿ ನಾಡೋಜ ಡಾ. ಹೆಚ್ ನರಸಿಂಹಯ್ಯ ರವರ ಪುತ್ಥಳಿಯನ್ನು ಸ್ಥಾಪಿಸಲು ದರಪಟ್ಟಿ ಸಲ್ಲಿಸಿರುವ ಸಂಸ್ಥೆಗಳ ಪೈಕಿ ಕಡಿಮೆ ದರ ನಮೂದಿಸಿರುವ ಮೆ. ಜಾಹ್ನವಿ ಕಲಾ ಸಂಸ್ಥೆ, ಬೆಂಗಳೂರು ಇವರ ದರಪಟ್ಟಿಯನ್ನು ಅನುಮೋದಿಸಿ ಮೊತ್ತ ರೂ.2,73,760/- ಗಳಲ್ಲಿ ಡಾ. ಹೆಚ್ ನರಸಿಂಹಯ್ಯ ರವರ ಪುತ್ಥಳಿಯನ್ನು ನಿರ್ಮಿಸಲು ಸಿಂಡಿಕೇಟ್ ಅನುಮತಿಸಿತು.

*Proceedings of the 167th meeting of the Syndicate held on 24.01.2023*

**Item No. 35:** To ratify the in-charge arrangements made to discharge the duties of Director of Planning, Monitoring and Evaluation Board (PMEB) in the University-reg.

***Resolution:***

The Syndicate resolved to ratify the action taken by the University in appointing Prof. V.V. Suresh Babu, Dean, Faculty of Science, Professor, Dept. of Chemistry, Bangalore University as the Director, in-charge of the Planning, Monitoring and Evaluation Board (PMEB).

*Proceedings of the 167th meeting of the Syndicate held on 24.01.2023*

**Item No. 36:** Procurement of answer booklets and Non-core OMR sheets to the Examination branch, Bangalore University for the academic year 2022-23 & 2023-24 –reg.

The Registrar (Evaluation) briefed the Syndicate that procurement order was issued with the approval of Hon'ble Vice-Chancellor to procure 2.5 lakhs of answer scripts out of the 22 lakhs answer scripts called for in the Tender, as per the rates finalized by the Central Purchase Committee at its meeting held on 28.12.2022 and the said answer scripts will be used for 1st Semester NEP examinations. Now the 3rd semester under NEP scheme, 5th semester of CBCS scheme and 1st, 3rd& 5th semester repeaters (CBCS)/ one time measure and also for PG/B.Ed courses, the examinations are scheduled to be held shortly. Therefore, the answer scripts have to be procured immediately, otherwise the examinations have to be postponed. He requested for approval to procure required number of answer scripts as per the Tender finalized and approval of the Purchase Committee.

Mr. Udaya Kumar M took objection for the procurement of large volume of answer scripts at one stretch and he said that he had raised objection in the Central Purchase Committee also in this regard. The matters related to procurement of answer scripts/marks cards etc., are being placed before the Syndicate at the critical movement. Instead the Examination Branch would have planned well in advance and taken care to procure the answer scripts at a competitive price by considering all the options. He urged to take action to retender for the procurement of the above said materials.

Dr.Sudhakara H said that it was agreed in the Central Purchase Committee meeting to procure 2.5 lakhs answer scripts in view of urgency. The minimum requirement for the forthcoming examination may be procured and to plan for future requirements by inviting new Tender.

It was informed to the Syndicate that in the Central Purchase Committee (CPC) at its meeting held on 28.12.2022, negotiation was held with the successful bidder (L1) and the rates were finalized i.e., Rs.17/- per answer script for the procurement. It was also recorded in the proceedings of the CPC that 12 lakhs answer scripts will be required for conduct of next two examinations. Nearly, an additional 5 to 5.5 lakhs answer scripts are required to conduct the forthcoming examinations which are scheduled to be held during February 2023 and supply order be given well in advance in order to give time for the printing.

***Resolution:***

After detailed discussions, the Syndicate resolved to procure 5.50 lakhs answer scripts and required number of non-core OMR sheets for the forthcoming examinations at a rate finalized by the Central Purchase Committee in its meeting held on 28.12.2022 from M/S Hitech Prints System Pvt. Ltd., (L1) and to invite fresh Tender for the next examinations or to work out the feasibility of printing required answer scripts in the University Printing Press by providing required infrastructure.

*Proceedings of the 167th meeting of the Syndicate held on 24.01.2023*

**Item No. 37:** Collection/Payment of Goods and Service Tax (GST) on affiliation fee-reg.

***Resolution:***

The Syndicate noted that the Education Services are exempted from payment of Goods and Service Tax (GST) chapter 9992 Serial No. 66 of Notification No.12/2017- Central Tax (Rate) dated 28th June, 2017. It was ascertained that the affiliation/recognition fee being paid to the University is collected indirectly from the students and in case GST is included in the affiliation fee the burden will be on the students. Further, GST has not been collected from the Colleges from the year 2017-18. Therefore, it was decided not to pay GST and to submit an appropriate reply to the concerned department. Further, it was resolved not to collect GST on affiliation fee and write to the State Government to take up the issue at the GST Council.

*Proceedings of the 167th meeting of the Syndicate held on 24.01.2023*

**ವಿಷಯ ಸಂಖ್ಯೆ 38:** ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಪಟ್ಟಣ, ಇಲ್ಲಿ ಸೆಪ್ಟೆಂಬರ್ 2021 ರ 6ನೇ ಸೆಮಿಸ್ಟರ್ ಬಿ.ಕಾಂ ಪತ್ರಿಕೆಯ ಪ್ರಿನ್ಸಿಪಲ್ ಆಫ್ ಪ್ರಾಕ್ಟೀಸ್ ಮತ್ತು ಆಡಿಟಿಂಗ್ ವಿಷಯಕ ಪರೀಕ್ಷಾ ಫಲಿತಾಂಶ ಹಾಗೂ 2013 ರಿಂದ ಬಾಕಿ ಉಳಿದಿರುವ ಫಲಿತಾಂಶಗಳನ್ನು ಪ್ರಕಟಿಸುವ ಬಗ್ಗೆ.

ಶ್ರೀ ಉದಯ ಕುಮಾರ್ ಎಂ ಹಾಗೂ ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಪ್ರೊ. ಟಿ.ವಿ. ರಾಜು ಅವರು ಸಲ್ಲಿಸಿದ ವರದಿಯನುಸಾರ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಶ್ರೀ ಉದಯ ಕುಮಾರ್ ಎಂ ಅವರು ಮುಂದುವರೆದು ಮಾತನಾಡಿ, ಕೆಲವು ವಿದ್ಯಾರ್ಥಿಗಳಿಗೆ 2013ರ ಪರೀಕ್ಷೆಯ ಫಲಿತಾಂಶವನ್ನು ಇನ್ನೂ ಪ್ರಕಟಿಸಿರುವುದಿಲ್ಲ ಈ ಬಗ್ಗೆ ಸಂಬಂಧಪಟ್ಟವರ ಮೇಲೆ ಕ್ರಮವಹಿಸಬೇಕೆಂದು ತಿಳಿಸಿದರು.

ಕುಲಸಚಿವರು(ಮೌಲ್ಯಮಾಪನ) ಅವರು ಮಾತನಾಡಿ, ಕೆಲವು ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಬಹಳವಾಗಿ ಹುಡುಕಿದರೂ ಸಿಗುತ್ತಿಲ್ಲ, ವಿದ್ಯಾರ್ಥಿಗಳು ಪ್ರತಿ ನಿತ್ಯ ಪರೀಕ್ಷಾ ಭವನಕ್ಕೆ ಭೇಟಿ ನೀಡಿ ಫಲಿತಾಂಶ/ಅಂಕಪಟ್ಟಿ ನೀಡಲು ಒತ್ತಾಯಿಸುತ್ತಿದ್ದಾರೆ. ಉತ್ತರ ಪತ್ರಿಕೆಗಳು ಸಿಗದಂತಹ ಪ್ರಕರಣಗಳ ಸಂಖ್ಯೆ ಸ್ನಾತಕ ಪರೀಕ್ಷೆಯ ಸುಮಾರು 95 ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ಪದವಿಯ ಸುಮಾರು 15 ವಿದ್ಯಾರ್ಥಿಗಳು ಇರಬಹುದು. ಈ ಹಿಂದೆ ಉತ್ತರ ಸಿಗದಂತಹ ಪ್ರಕರಣಗಳಲ್ಲಿ ವಿದ್ಯಾರ್ಥಿಗಳು ಇತರ ಪತ್ರಿಕೆಗಳಲ್ಲಿ ಪಡೆದಿರುವ ಸರಾಸರಿ ಅಂಕ ನೀಡಿ ಫಲಿತಾಂಶ ಪ್ರಕಟಿಸಲು ಸಿಂಡಿಕೇಟ್ ಅನುಮೋದಿಸಿದೆ. ಆದಕಾರಣ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕ್ರಮ ನಿರ್ಣಯ ಕೈಗೊಳ್ಳಬೇಕೆಂದು ಕೋರಿದರು.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಮಾಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸಂಬಂಧಪಟ್ಟ ವಿದ್ಯಾರ್ಥಿಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದಿನ ಸಿಂಡಿಕೇಟ್ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಎಲ್ಲಾ ವಿದ್ಯಾರ್ಥಿಗಳಿಗೂ ಸಮಾನವಾದ ನಿರ್ಣಯ ತೆಗೆದುಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ನಿರ್ಣಯ:

ಸುದೀರ್ಘ ಚರ್ಚೆಯ ನಂತರ, ತಾಂತ್ರಿಕ ಸಮಿತಿಯ ವರದಿಯನುಸಾರ ಹಾಗೂ ಈ ಹಿಂದೆ 2014, 2019 ಮತ್ತು 2020ರಲ್ಲಿ ತೆಗೆದುಕೊಂಡಿರುವ ಸಿಂಡಿಕೇಟ್ ನಿರ್ಣಯದಂತೆ ಉತ್ತರ ಪತ್ರಿಕೆ ಸಿಗದ ಪ್ರಕರಣಗಳಲ್ಲಿ ವಿದ್ಯಾರ್ಥಿಗಳು ಆಯಾ ಪರೀಕ್ಷೆಯಲ್ಲಿ ಸಂಬಂಧಪಟ್ಟ ಸೆಮಿಸ್ಟರ್‌ನ ಇತರ ವಿಷಯಗಳಲ್ಲಿ ಪಡೆದಿರುವ ಸರಾಸರಿ ಅಂಕವನ್ನು ಲೆಕ್ಕಮಾಡಿ ಉತ್ತರ ಪತ್ರಿಕೆ ಸಿಗದ ವಿಷಯಕ್ಕೆ ನಿಗದಿಪಡಿಸಿ ಫಲಿತಾಂಶ ಪ್ರಕಟಿಸಲು ಸಿಂಡಿಕೇಟ್ ಅನುಮೋದಿಸಿತು.



**Item No. 39:** To consider the reports of Screening cum Evaluation/Selection Committee under UGC-CAS for promotion under the faculty of Arts & Science as per the Statutes notified on 30.05.2022.

***Resolution:***

After detailed discussions, the Syndicate resolved to approve the following recommendations of the Screening cum Evaluation/Selection Committees for Promotion of teachers under UGC-CAS Scheme.

**1. Communication (05-01-2023):**

*" As per the grading criteria the candidates have secured "Good" grading and fulfilled the minimum criteria of Research Score as per Appendix-I, Table-2. Therefore, the Selection Committee recommends following candidates for promotion from* ***Associate Professor (Academic level 13A) to Professor (Academic level 14)*** *on supernumerary basis with effect from the date of fulfilling the required eligibility.*

*1. Dr. N.Sanjeevaraja w.e.f. 20.01.2021*
*2. Dr. B.Shailashree w.e.f. 21.02.2022 "*

ಟ 3/2/23

**2. Electronic Media (05-01-2023):**

*" As per the grading criteria the candidate has secured "Good" grading and fulfilled the minimum criteria of Research Score as per Table-1 and Table 2 of Appendix-I. Therefore, the Selection Committee recommends **Dr. Vahini** for promotion from **Assistant Professor (Academic level 12) to Associate Professor (Academic level 13A)** on supernumerary basis with effect from **30.09.2022** the date of fulfilling the required eligibility."*

**3. Economics (05-01-2023):**

*A.Selection Committee :*

*"As per the grading criteria the candidate has secured "Good" grading and fulfilled the minimum criteria of Research Score as per Table-1 and Table 2 of Appendix-I. Therefore, the Selection Committee recommends **Dr. S. Puttaswamaiah** for promotion from **Associate Professor (Academic level 13A) to Professor (Academic level 14)** on supernumerary basis with effect from **01.07.2022** the date of fulfilling the required eligibility."*

*B. Screening-cum-Evaluation Committee:*

*"As per the grading criteria the candidate has secured "Good" grading and fulfilled the minimum criteria of Research Score as per Table-1 and Table 2 of Appendix-I. Therefore, the Screening-cum-Evaluation Committee recommends **Dr. S. Jayalakshmi Priya** for promotion from **Assistant Professor (Academic level 11) to Assistant Professor (Academic level 12)** with effect from **30.12.2020** the date of fulfilling the required eligibility. "*

**4. Microbiology (07-01-2023):**

*"As per the grading criteria the candidates have secured "Good" grading and fulfilled the minimum criteria of Research Score as per Table-1 and Table 2 of Appendix-I. Therefore, the Selection Committee recommends following candidates for promotion from **Associate Professor (Academic level 13A) to Professor (Academic level 14)** on supernumerary basis with effect from the date of fulfilling the required eligibility.*

| | |
|---|---|
| *1. Dr. M. Sreepriya* | *w.e.f 15.06.2022* |
| *2. Dr. S. T. Girish* | *w.e.f 15.06.2022* |
| *3. Dr. T. Ravikiran* | *w.e.f 15.06.2022* |
| *4. Dr. R. Lakshminarayana* | *w.e.f 16.06.2022* |
| *5. Dr. T. Sharmila* | *w.e.f 05.07.2022* |
| *6. Dr. D. C. Mohana* | *w.e.f 11.08.2022"* |

4 3/1/23

*Proceedings of the 167th meeting of the Syndicate held on 24.01.2023*

**Item No. 40:** Proceedings of the 8th meeting of the committee for acceptance and approval of the lowest tenders notified by the Engineering Division, Bangalore University, Bangalore.

***Resolution:***

After detailed discussions, the Syndicate resolved to approve the Proceedings of the 8th meeting of the Committee for acceptance and approval of the lowest tenders held on 19-01-2023.

*Proceedings of the 167th meeting of the Syndicate held on 24.01.2023*

**ವಿಷಯ ಸಂಖ್ಯೆ 41:** ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಡಾ. ಹೆಚ್. ನರಸಿಂಹಯ್ಯ ರವರ ಪುತ್ಥಳಿಯನ್ನು ಸ್ಥಾಪಿಸಲು ಸಿವಿಲ್ ಮತ್ತು ಉದ್ಯಾನವನ ನಿರ್ಮಿಸಲು ಕೈಗೊಳ್ಳುವ ಕಾಮಗಾರಿಗಳ ಬಗ್ಗೆ.

**ನಿರ್ಣಯ:**

ಸುದೀರ್ಘ ಚರ್ಚೆಯ ನಂತರ, ದಿನಾಂಕ: 13–09–2022ರ 165ನೇ ಸಿಂಡಿಕೇಟ್ ಸಭೆಯ ನಿರ್ಣಯದಂತೆ, ಡಾ. ಹೆಚ್. ನರಸಿಂಹಯ್ಯ ರವರ ಪುತ್ಥಳಿಯನ್ನು ನಿರ್ಮಿಸಲು ನಿಗದಿಪಡಿಸಿರುವ ಸ್ಥಳದ ಸುತ್ತ ಸಿವಿಲ್ ಕಾಮಗಾರಿ ಹಾಗೂ ಉದ್ಯಾನ ನಿರ್ಮಿಸುವ ಸಂಬಂಧ ಸಲ್ಲಿಸಲಾದ ಕಾಮಗಾರಿಗಳಿಗೆ, ಶೇ18 ಜಿ.ಎಸ್.ಟಿ. ಸೇರಿ ಒಟ್ಟು ಮೊತ್ತ ರೂ.14,95,000/–(ಹದಿನಾಲ್ಕು ಲಕ್ಷ ತೊಂಬತ್ತೈದು ಸಾವಿರ ರೂಪಾಯಿಗಳು)ಗಳ ಅಂದಾಜುಪಟ್ಟಿಯನ್ನು ಸಿಂಡಿಕೇಟ್ ಅನುಮೋದಿಸಿತು.

*Proceedings of the 167th meeting of the Syndicate held on 24.01.2023*

**ವಿಷಯ ಸಂಖ್ಯೆ 42:** ಡಾ. ಗೋವಿಂದರಾಜು, ಅಭಿವೃದ್ಧಿ ಅಧಿಕಾರಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ನಿಯವರ ವೈದ್ಯಕೀಯ ವೆಚ್ಚದ ಮರುಪಾವತಿಯ ಬಗ್ಗೆ.

**ನಿರ್ಣಯ:**

ಸುದೀರ್ಘ ಚರ್ಚೆಯ ನಂತರ, ಡಾ. ಗೋವಿಂದರಾಜು, ಅಭಿವೃದ್ಧಿ ಅಧಿಕಾರಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ನಿಯವರ ಅತ್ಯಂತ ಪ್ರಮುಖ/ವಿಶಿಷ್ಠ ಕಾಯಿಲೆಗಳ ಚಿಕಿತ್ಸೆಯ ಸಂಬಂದಪಟ್ಟಂತೆ ಮಾರ್ಚ್ 2022ರಿಂದ ಇಂದಿನ ದಿನಾಂಕದವರೆಗೆ ಮಾಡಲಾದ ವೈದ್ಯಕೀಯ ವೆಚ್ಚದ ವ್ಯತ್ಯಾಸದ ಮೊತ್ತವನ್ನು ಮರುಪಾವತಿಯನ್ನು ಮಾಡಲು ಹಾಗೂ ಮುಂಬರುವ ಅವಧಿಗೆ ಆಗುವ ಚಿಕಿತ್ಸೆಯ ಪೂರ್ಣ ವೆಚ್ಚದ ದರಗಳನ್ನು ಮರುಪಾವತಿಗೆ ಸಿಂಡಿಕೇಟ್ ಅನುಮೋದಿಸಿತು.

**Item No. 43:** Consideration of Instituting Aptitude Courses in the Curriculum of PG and UG Courses and setting up of Language Lab and Skill Centre.

***Resolution:***

After detailed discussions, the Syndicate resolved to approve the proceedings of the meeting of the statutory officers held with Mr. Ashwin D Gowda, IRS, Managing Director, Karnataka Skill Development Corporation, Govt. of Karnataka, on 23-01-2023 under the Chairmanship of the Vice-Chancellor and to take further action as per the decision of the meeting including setting up of Language Lab and Skill Centre with the assistance of Karnataka Skill Development Corporation and appointment of Nodal Officers for Skill Centre & Language Lab / nomination of faculty members for framing syllabus in respect of Aptitude Courses in UG and PG / creation of infrastructure facilities at IT Centre.

*Proceedings of the 167th meeting of the Syndicate held on 24.01.2023*

**Item No. 44:** MoU with M/s. Maruthi Suzuki Limited, New Delhi for offering BBA (Retail Management) course in Jnana Bharathi Campus, Bangalore University-reg.

***Resolution:***

The Syndicate acknowledged the initiatives taken by the Vice-Chancellor in introduction of job oriented courses, in collaboration with Industries and resolved to approve the draft MoU/agreement with M/s. Maruthi Suzuki Limited, New Delhi, for offering BBA (Retail Management) course in Jnana Bharathi Campus, Bangalore University from the academic year 2023-24 under NEP model.

**GENERAL DISCUSSION**:-

1. ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಸಿಂಡಿಕೇಟ್ ನಿರ್ಣಯಗಳು ಅನುಷ್ಠಾನ ಆಗುತ್ತಿದ್ದೆಯೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಸಿಂಡಿಕೇಟ್ ಸಭೆಯ ಕರ್ತವ್ಯವಾಗಿರುತ್ತದೆ. 2022–23ನೇ ಸಾಲಿಗೆ ರಾಮನಗರ ಸ್ನಾತಕೋತ್ತರ ಕೇಂದ್ರದಲ್ಲಿ, ಎಂ.ಎಸ್.ಡಬ್ಲ್ಯೂ, ಎಂ.ಎ. ಅರ್ಥಶಾಸ್ತ್ರ, ಸಮಾಜಶಾಸ್ತ್ರ ಹಾಗೂ ರಾಜ್ಯಶಾಸ್ತ್ರ ಈ ನಾಲ್ಕು ವಿಷಯಗಳಿಗೆ ಸಂಬಂಧಿಸಿದಂತೆ, ಅತಿಥಿ ಉಪನ್ಯಾಸಕರನ್ನು ನಿಯಮಗಳನ್ನು ಅನುಸರಿಸದೇ ನೇಮಕಾತಿ ಮಾಡಿಕೊಂಡಿರುತ್ತಾರೆ. ಪಿ.ಎಚ್.ಡಿ. ಹಾಗೂ ಎನ್.ಇ.ಟಿ.

ಅರ್ಹತೆ ಇದ್ದರೂ ಅಂತಹ ಅಭ್ಯರ್ಥಿಗಳನ್ನು ಕಡೆಗಣಿಸಿ, ಸದರಿ ವಿದ್ಯಾರ್ಹತೆ ಇಲ್ಲದ ಹಾಗೂ ಅನುಭವವಿಲ್ಲದ ಅಭ್ಯರ್ಥಿಗಳಿಗೆ ಆದ್ಯತೆ ನೀಡಿ ಅತಿಥಿ ಉಪನ್ಯಾಸಕರನ್ನಾಗಿ ನೇಮಕ ಮಾಡಿಕೊಳ್ಳಲಾಗಿದೆ. ಆದ್ದರಿಂದ ಈ ವಿಷಯಗಳಿಗೆ ನೇಮಕ ಮಾಡಲಾದ ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ತಡೆ ಹಿಡಿಯಲು ಕೋರಿದರು.

ಡಾ. ಕೆ.ಎ. ಮಹೇಶ್ವರಯ್ಯ ಅವರು ಮಾತನಾಡಿ, ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡುವಾಗ ಸ್ನಾತಕ ಪದವಿಗಳಿಗೆ ಬೋಧಿಸುವ ಅರ್ಹತೆಯುಳ್ಳ ಶಿಕ್ಷಕರನ್ನು ಸಹ ಪರಿಗಣಿಸಬೇಕೆಂದು ತಿಳಿಸಿದರು.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ರಾಮನಗರ ಸ್ನಾತಕೋತ್ತರ ಕೇಂದ್ರದಲ್ಲಿ ಕೆಲವು ವಿಷಯಗಳಿಗೆ ಪ್ರವೇಶ ಸಂಖ್ಯೆ ಬಹಳ ಕಡಿಮೆ ಇದೆ. ವಿದ್ಯಾರ್ಥಿಗಳಿಗಿಂತ ಅತಿಥಿ ಉಪನ್ಯಾಸಕರೆ ಹೆಚ್ಚಾಗಿರುತ್ತಾರೆ. ಇದರಿಂದಾಗಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯಾಗುತ್ತಿದೆ. ಆದುದರಿಂದ ಈ ಬಗ್ಗೆ ಒಂದು ಸಮಿತಿಯಿಂದ ವರದಿ ಪಡೆದು ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕೆಂದು ಅಭಿಪ್ರಾಯಪಟ್ಟರು.

ಕುಲಸಚಿವರು ಮಾತನಾಡಿ, ರಾಮನಗರ ಸ್ನಾತಕೋತ್ತರ ಕೇಂದ್ರಕ್ಕೆ ಅತಿಥಿ ಉಪನ್ಯಾಸಕರ ನೇಮಕಾತಿಯು ನಿಯಮಾನುಸಾರವಾಗಿ ನಡೆದಿದೆ. ಆದರೆ, ಅತಿಥಿ ಉಪನ್ಯಾಸಕರಿಗೆ ಕಾರ್ಯಭಾರ ಹಂಚಿಕೆಯಲ್ಲಿ ವ್ಯತ್ಯಯವಾಗಿದೆ ಎಂದು ಅತಿಥಿ ಉಪನ್ಯಾಸಕರು ಮನವಿ ಸಲ್ಲಿಸಿದ್ದಾರೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಶ್ರೀ ಉದಯ ಕುಮಾರ್ ಎಂ ಅವರು ತಿಳಿಸಿದ ವಿಷಯ ಈಗಾಗಲೇ ತಮ್ಮ ಗಮನಕ್ಕೆ ಬಂದಿರುತ್ತದೆ. ಪ್ರಸಕ್ತ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಲು ಆಯಾ ವಿಭಾಗದ ಮುಖ್ಯಸ್ಥರಿಗೆ ಜವಾಬ್ದಾರಿ ವಹಿಸಲಾಗಿದ್ದು, ಹೊರಗಿನ ವಿಷಯ ಪರಿಣಿತರೂ ಸಹ ಸಮಿತಿಯಲ್ಲಿದ್ದರು. ಸ್ನಾತಕೋತ್ತರ ವಿಭಾಗಗಳ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಯಾವುದೇ ವ್ಯತ್ಯಯ ಆಗಿರುವುದಿಲ್ಲವೆಂದು ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು ಲಿಖಿತವಾಗಿ ತಿಳಿಸಿರುತ್ತಾರೆ. ಆದ್ದರಿಂದ ಒಂದು ಬಾಹ್ಯ ಸಮಿತಿಯನ್ನು ರಚಿಸಿ ವರದಿ ಪಡೆದುಕೊಳ್ಳುವವರೆಗೂ ಆದೇಶ ತಡೆಹಿಡಿಯಲಾಗುವುದು ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ) ಇವರನ್ನೊಳಗೊಂಡ ಸಮಿತಿಯು ರಾಮನಗರ ಸ್ನಾತಕೋತ್ತರ ಕೇಂದ್ರಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದು, ಅತಿಥಿ ಉಪನ್ಯಾಸಕರ ನೇಮಕಾತಿ/ಕಾರ್ಯಭಾರದ ಬಗ್ಗೆ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಕುರಿತು ವರದಿ ನೀಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು ಅಲ್ಲಿಯವರೆಗೂ ಉಲ್ಲೇಖಿಸಿರುವ ನಾಲ್ಕು ವಿಷಯಗಳಿಗೆ ಸಂಬಂಧಪಟ್ಟಂತೆ 2022-23ನೇ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ತಡೆಹಿಡಿಯಲು ಹಾಗೂ ಹಿಂದಿನ ಸಾಲಿನಲ್ಲಿದ್ದ ವ್ಯವಸ್ಥೆಯನ್ನು ಮುಂದುವರೆಸಬೇಕೆಂದು ಸೂಚಿಸಿತು.

2. ಕುಲಪತಿಗಳು ಮಾತನಾಡಿ, ಶೈಕ್ಷಣಿಕ ಹಾಗೂ ಆಡಳಿತ ಕಾರ್ಯಗಳು ನಿಗದಿತ ಸಮಯದಲ್ಲಿ ಪೂರ್ಣಗೊಳ್ಳಲು ಅನುವಾಗುವಂತೆ, ಪ್ರತಿ ವಿಭಾಗಗಳು/ಕಛೇರಿಗಳು ಶೈಕ್ಷಣಿಕ ವರ್ಷದಲ್ಲಿ ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ ವೇಳಾಪಟ್ಟಿಯನ್ನು ಸಿದ್ದಪಡಿಸಲು ಸೂಚಿಸಲಾಗುವುದು ಎಂದು ತಿಳಿಸಿದರು.

3. ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ, ಎಲ್ಲಾ ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ಪ್ರತಿಕ್ರಿಯೆ ಪಡೆದುಕೊಳ್ಳುವುದು ಕಡ್ಡಾಯಗೊಳಿಸಬೇಕೆಂದು ಹಾಗೂ ಸ್ನಾತಕೋತ್ತರ ಕೋರ್ಸುಗಳ 4ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಂದ ಫೆಬ್ರವರಿ 2023ರ 2ನೇ ವಾರದ ಒಳಗಾಗಿ ವಿದ್ಯಾರ್ಥಿಗಳಿಂದ ಪ್ರತಿಕ್ರಿಯೆ ಪಡೆದುಕೊಳ್ಳಲು ಎಲ್ಲಾ ವಿಭಾಗದ ಮುಖ್ಯಸ್ಥರಿಗೆ ಸೂಚಿಸಬೇಕೆಂದು ತಿಳಿಸಿದರು.

4. ಶ್ರೀ ಉದಯಕುಮಾರ್ ಎಂ ಅವರು ಮಾತನಾಡಿ, ಮಹಿಳಾ ಅಧ್ಯಯನ ಕೇಂದ್ರದಲ್ಲಿ ನೇಮಕವಾದ ಮೂವರು ಶಿಕ್ಷಕರ ನೇಮಕಾತಿಯನ್ನು ಮಾನ್ಯ ಉಚ್ಚನ್ಯಾಯಾಲಯವು ಅನೂರ್ಜಿತಗೊಳಿಸಿದ ಹಾಗೂ ಈ ಸಂಬಂಧ ವಿಶ್ವವಿದ್ಯಾಲಯ ಹಾಗೂ ಶಿಕ್ಷಕರು ಸಲ್ಲಿಸಿದ ಮೇಲ್ಮನವಿಯನ್ನು ತಿರಸ್ಕರಿಸಿ ವಿಶ್ವವಿದ್ಯಾಲಯಕ್ಕೆ ರೂ.50,000/-ಗಳ ದಂಡ ವಿಧಿಸಲಾಗಿದೆ. ಆದ್ದರಿಂದ, ಸದರಿ ಶಿಕ್ಷಕರನ್ನು ಬಿಡುಗಡೆಗೊಳಿಸುವ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ನೀಡಬೇಕೆಂದು ಕೋರಿದರು.

ಕುಲಸಚಿವರು ಮಾತನಾಡಿ, ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಹಾಗೂ ಆದೇಶವನ್ನು ಕಾರ್ಯಗತಗೊಳಿಸಲು ಮೂರು ತಿಂಗಳ ಕಾಲಾವಕಾಶವಿರುತ್ತದೆ. ಸ್ವಾಭಾವಿಕ ನ್ಯಾಯದನುಸಾರ ಸದರಿ ಶಿಕ್ಷಕರಿಗೆ ಮೂರು ತಿಂಗಳ ಕಾಲಾವಕಾಶ ನೀಡಬೇಕಾಗುತ್ತದೆ. ಈಗಾಗಲೇ ಸದರಿ ಶಿಕ್ಷಕರು ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ. ಉಚ್ಚನ್ಯಾಯಾಲಯದ ಆದೇಶಕ್ಕೆ ತಡೆಯಾಜ್ಞೆ ಸಿಗದಿದ್ದ ಪಕ್ಷದಲ್ಲಿ ನ್ಯಾಯಾಲಯದ ಆದೇಶವನ್ನು ಕಾರ್ಯರೂಪಕ್ಕೆ ತರಲಾಗುವುದು ಎಂದು ತಿಳಿಸಿದರು.

5. ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಸಿಂಡಿಕೇಟ್ ಸಭೆಗೆ ಸಲ್ಲಿಸಿದ ಮನವಿಯ ಬಗ್ಗೆ ಚರ್ಚಿಸಿ, ವಿಶ್ವವಿದ್ಯಾಲಯದ ಅಭಿಯಂತರರಿಗೆ ವಿದ್ಯಾರ್ಥಿನಿಲಯಗಳಲ್ಲಿ ಕೈಗೊಂಡಿರುವ ರಿಪೇರಿ ಕಾಮಗಾರಿಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕೆಂದು ಸಿಂಡಿಕೇಟ್ ಸೂಚಿಸಿತು. ಪಿ.ಎಚ್.ಡಿ. ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವ ಬಗ್ಗೆ Financial Bid ತೆರೆಯಲಾಗಿದ್ದು ವಿಷಯವನ್ನು ಕೇಂದ್ರ ಖರೀದಿ ಸಮಿತಿಯ ಮುಂದಿ ಮಂಡಿಸಲಾಗಿದ್ದು, ಸದರಿ ಸಮಿತಿ ಹಾಗೂ ಸಿಂಡಿಕೇಟ್ ಅನುಮೋದನೆಯ ನಂತರ ವಿದ್ಯಾರ್ಥಿಗಳಿಗೆ ಎರಡು ತಿಂಗಳುಗಳ ಒಳಗಾಗಿ ಲ್ಯಾಪ್‌ಟಾಪ್ ಅನ್ನು ನೀಡಲಾಗುವುದು ಎಂದು ಸಿಂಡಿಕೇಟ್ ಗಮನಕ್ಕೆ ತರಲಾಯಿತು.

ಜ್ಞಾನಭಾರತಿ ಆವರಣದಲ್ಲಿ ಅಪಘಾತಕ್ಕೀಡಾಗಿ ಮರಣ ಹೊಂದಿದ ಗಣಿತಶಾಸ್ತ್ರ ವಿಭಾಗದ ವಿದ್ಯಾರ್ಥಿಯಾದ ಕು. ಶಿಲ್ಪಶ್ರೀ ಅವರ ಕುಂಟಂಬಕ್ಕೆ ಆರ್ಥಿಕ ನೆರವು ನೀಡುವ ಬಗ್ಗೆ ಸರ್ಕಾರಕ್ಕೆ 2 ಪತ್ರ ಬರೆದಿದ್ದು, ನೆನಪೋಲೆಯನ್ನು ಸಹ ಕಳುಹಿಸಲಾಗಿದೆ. ಮಾನ್ಯ ಉನ್ನತ ಶಿಕ್ಷಣ ಸಚಿವರೂ ಸಹ ಸನ್ಮಾನ್ಯ

ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದ್ದಾರೆ. ಈ ಬಗ್ಗೆ ಮತ್ತೊಮ್ಮೆ ಸರ್ಕಾರಕ್ಕೆ ಪತ್ರ ಬರೆದು ಅರ್ಥಿಕ ನೆರವು ನೀಡಲು ಕೋರಲಾಗುವುದು ಎಂದು ಕುಲಪತಿಗಳು ಸಿಂಡಿಕೇಟ್ ಸಭೆಗೆ ತಿಳಿಸಿದರು.

6. ವಿದ್ಯಾರ್ಥಿಗಳ ಇನ್ನಿತರ ಕುಂದು ಕೊರತೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಾದ, ನಿರ್ದೇಶಕರು ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ವಿಶೇಷಾಧಿಕಾರಿ, ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಕೋಶ ಮತ್ತು ವಿಶ್ವವಿದ್ಯಾಲಯದ ಅಭಿಯಂತರರು ಇವರ ಸಭೆ ಕರೆದು, ವಿದ್ಯಾರ್ಥಿಗಳ ಕುಂದು ಕೊರತೆಗಳನ್ನು ಪರಿಹರಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಸಿಂಡಿಕೇಟ್ ಸೂಚಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಯವರು |

//ಪ್ರತಿ//

ಕುಲಸಚಿವರು 3/2/23